


## ಹಿಂದಣ ಹೆಜ್ಜೆಯ ಅರಿವು

ಕನ್ನಡ ನುಡಿಪರಂಪರೆಯನ್ನು ತಮ್ಮ ಅನುಭಾವದ ಮುಖೇನ ಬೆಳಗಿದ ದಾರ್ಶನಿಕರಲ್ಲಿ ಅಲ್ಲಮ ಇತ್ತ ಅರಿವು ಮಹತ್ತರವಾದುದು. 'ಹಿಂದಣ ಹೆಜ್ಜೆಯ ಕಂಡಲ್ಲದೆ ನಿಂದ ಹೆಜ್ಜೆಯನರಿಯಬಾರದು...' ಎಂಬ ಅಲ್ಲಮನುಡಿಯು ಇಂದಿನ ಹೆಜ್ಜೆಯನ್ನು ಸಮರ್ಥವಾಗಿ ಇಡಬೇಕಾದರೆ ಹಿಂದಣ ಹೆಜ್ಜೆಗಳನ್ನು ಸೂಕ್ಷ್ಮವಾಗಿ ಅರಿಯುವುದು ಅತ್ಯಗತ್ಯ ಎಂಬುದನ್ನು ಪ್ರತಿಧ್ವನಿಸುತ್ತದೆ. ಗ್ರಾಮಲೋಕದ ಅನುಭಾವಿಕ ಜಾನಪದರು 'ಹಿಂದ್ಕು ಮುಂದ್ಕು ನೋಡ್ಕಂಡು ಸರೀಗ ನಡಿ' ಎಂದಿರುವ ನುಡಿಯೂ ಇವತ್ತಿನವರಲ್ಲಿ ಬೆಳಗಬೇಕಾದ ಅವತ್ತಿನವರ ತಿಳಿವನ್ನೇ ಸೂಚಿಸುತ್ತದೆ. ಇಂಥ ನುಡಿಬೆಳಗು ನಮ್ಮ ಬದುಕಿಗೆ ಮಾತ್ರವಲ್ಲದೇ, ಬೌದ್ಧಿಕ ನಡೆಗೂ ಮಾರ್ಗದರ್ಶಕವಾಗಿದೆ. ಕನ್ನಡ ಸಂಶೋಧನ ಚರಿತ್ರೆಯಲ್ಲಿ ವಿದ್ವನ್ಮಣಿಗಳಾಗಿ ಬೆಳಗಿದ ಹಿಂದಣ ಸಂಶೋಧಕ ಸಾಲುದೀಪಗಳನ್ನು ಇಂದಿನ-ಹೊಸತಲೆಮಾರಿನ ಸಂಶೋಧಕರು ತಮ್ಮೊಳಗೆ ಅಂತಸ್ಥ ಮಾಡಿಕೊಂಡು ಸಾಗಬೇಕಿದೆ. ಹಿಂದಿನ ಸಂಶೋಧನ ಮಹಾಶಯರು ಸಾಗಿಬಂದಿರುವ ಹಾದಿಯೊಳಗೆ ಕಾಣುವ ನುಡಿಬದ್ಧತೆ, ಪ್ರಬುದ್ಧತೆ, ಪ್ರಖರ ಪಾಂಡಿತ್ಯ, ಶೋಧನಶಿಸ್ತು, ಸಂಯಮ, ಬಹುಶಿಸ್ತೀಯ ತಿಳಿವು, ಅವಿರತ ಕ್ಷೇತ್ರಕಾರ್ಯ, ತರ್ಕಬದ್ಧ ನಿರೂಪಣೆ, ಆರೋಗ್ಯಪೂರ್ಣ ಸಂವಾದ, ತಪ್ಪು-ಒಪ್ಪುಗಳ ವಿನಯಪೂರ್ಣ ಸ್ವೀಕಾರ ಮೊದಲಾದ ಗುಣಗಳು ವರ್ತಮಾನದ ಸಂಶೋಧಕರಿಗೆ ಮಾದರಿಯಾಗಿವೆ. ಹೀಗಾಗಿ ಹಿರಿಯರ ಇಂಥ ಮಹಾಮಾರ್ಗವನ್ನು ನಮ್ಮ ಕಾಲದ ಸಂಶೋಧಕರು ಅರಿಯುವ ಮೂಲಕ ತಮ್ಮ ಸಂಶೋಧನ ಮಾರ್ಗವನ್ನು ಬೆಳಗಿಕೊಳ್ಳುವಂತಾಗಲಿ ಎಂಬ ಮಹದಾಶಯದಲ್ಲಿ "ಹಿಂದಣ ಹೆಜ್ಜೆಯ ಅರಿವು" ಎಂಬ ಕಾಲಂ ಆರಂಭಿಸಲಾಗಿದೆ. ಕನ್ನಡ ಸಂಶೋಧನ ಚರಿತ್ರೆಯಲ್ಲಿ ಜಾನಪದ, ಹಳಗನ್ನಡ, ನಡುಗನ್ನಡ, ಹೊಸಗನ್ನಡ, ವ್ಯಾಕರಣ, ನಿಘಂಟು, ಛಂದಸ್ಸು, ಭಾಷಾವಿಜ್ಞಾನ, ಕಾವ್ಯಮೀಮಾಂಸೆ ಮೊದಲಾದ ಕ್ಷೇತ್ರಗಳಲ್ಲಿ ಹಿರಿಯ ಸಂಶೋಧಕರು ಮೂಡಿಸಿರುವ ಗುರುತರವಾದ ಹೆಜ್ಜೆಗಳನ್ನು ಅರಿಯುವ ನಿಟ್ಟಿನಲ್ಲಿ ಪ್ರತೀ ತಿಂಗಳು ಪ್ರಾತಿನಿಧಿಕ ಸಂಶೋಧನ ಲೇಖನವೊಂದನ್ನು ಇಲ್ಲಿ ನೀಡಲಾಗುವುದು. ಕನ್ನಡ ಸಂಶೋಧನಯಾನದ ಹಿಂದಣ ಹೆಜ್ಜೆಯ ಅರಿತು ಇಂದಿನ ಹೆಜ್ಜೆಯು ದೀಪ್ತಗೊಳ್ಳಲಿ ಎಂಬ ಆಶಯ ನಮ್ಮದು.

# ಔತ್ತರೇಯ ಭಾರತೀಯ ಭಾಷೆ–ಕೃತಿಗಳಲ್ಲಿ ಕರ್ನಾಟಕ ಸಂಸ್ಕೃತಿಯ ಕೆಲವು ಉಲ್ಲೇಖಗಳು

ವಿ. ಶಿವಾನಂದ

Article Link: https://aksharasurya.com/2024/02/v-shivananda.php

## ಆಶಯ ನುಡಿ

ಕನ್ನಡ ಸಾರಸ್ವತ ಲೋಕದಲ್ಲಿ ಎಲೆಮರೆಯ ಕಾಯಿಯಂತಿದ್ದು ಕನ್ನಡ ಸಂಶೋಧನ ಕ್ಷೇತ್ರವನ್ನು ಮತ್ತಷ್ಟು ಗಟ್ಟಿಯಾಗಿ ವಿಸ್ತರಿಸಿದ ಹಾಗೂ ಶ್ರೀಮಂತಗೊಳಿಸಿದ ವಿದ್ವಾಂಸರಲ್ಲಿ ಡಾ.ವಿ.ಶಿವಾನಂದ ಅವರು ಪ್ರಮುಖರು. ಅತ್ಯುತ್ತಮ ಕನ್ನಡ ಪ್ರಾಧ್ಯಾಪಕರಾಗಿ, ನಿರಂತರ ಅಧ್ಯಯನಶೀಲ ವಿದ್ವಾಂಸರಾಗಿ, ಪ್ರಥಮಶ್ರೇಣಿಯ ಸಂಶೋಧಕರಾಗಿ, ಶ್ರೇಷ್ಠ ಭಾಷಾವಿಜ್ಞಾನಿಯಾಗಿ ಅವರು ತಮ್ಮ ವಿದ್ವತ್ ಪ್ರತಿಭೆಯನ್ನು ಬೋಧನೆ ಮತ್ತು ಬರಹಗಳಲ್ಲಿ ಧಾರೆಯೆರೆದು ಕನ್ನಡ ಸಾರಸ್ವತ ಪ್ರಪಂಚವನ್ನು ಶ್ರೀಮಂತಗೊಳಿಸಿದವರು. ಶ್ರೀಯುತರು ಮೂಲತಃ ವಿಜಯಪುರ ಜಿಲ್ಲೆಯ ತಿಕೋಟಾ ತಾಲ್ಲೂಕಿನ ಕನಮಡಿ ಗ್ರಾಮದವರು. ತಂದೆ ಗುರುಪಾದಯ್ಯ, ತಾಯಿ ರಾಚಮ್ಮ. ಹುಟ್ಟಿದ್ದು 1–5–1941. ಪ್ರಾಥಮಿಕ ಶಿಕ್ಷಣವನ್ನು ಕನಮಡಿಯಲ್ಲಿ, ನಂತರ ಶ್ರೀ ಶರಣಬಸವೇಶ್ವರ ಹೈಸ್ಕೂಲ್‌ನಲ್ಲಿ ಹಾಗೂ ಶ್ರೀಶರಣಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಪಿಯುಸಿ, ತದನಂತರ, 1963ರಲ್ಲಿ ಬಿ.ಎ. ಪದವಿ ಪಡೆದರು. ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ. ಪದವೀಧರರು. 1971ರಲ್ಲಿ ಪಿಎಚ್.ಡಿ. ಪದವಿ ಪಡೆದರು. 'ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ' ಎಂಬುದು ಅವರ ಪಿಎಚ್.ಡಿ. ಪ್ರಬಂಧ. ಮಾರ್ಗದರ್ಶಕರು: ಡಾ.ಆರ್.ಸಿ. ಹಿರೇಮಠ. 1981–82ರ ಅವಧಿಯಲ್ಲಿ ಮದ್ರಾಸ್ ವಿಶ್ವವಿದ್ಯಾಲಯದಿಂದ ಪೋಸ್ಟ್ ಡಾಕ್ಟರಲ್ ಪದವಿ. ವಿಷಯ: ಗುಲಬರ್ಗಾ ಜಿಲ್ಲೆಯ ಒಕ್ಕಲುತನದ ವೃತ್ತಿಪದಗಳು. ಮಾರ್ಗದರ್ಶಕರು: ಡಾ.ಕೆ.ಕುಶಾಲಪ್ಪಗೌಡ. 1965ರಲ್ಲಿ ಕರ್ನಾಟಕ ವಿ.ವಿ.ಯ ಕನ್ನಡ ಅಧ್ಯಯನ ಪೀಠದಲ್ಲಿ ಸಹಾಯಕ ಸಂಶೋಧಕರಾದರು. ಹುಬ್ಬಳ್ಳಿಯ ಕಾಡಸಿದ್ಧೇಶ್ವರ ಕಾಲೇಜಿನಲ್ಲಿ ನಂತರ ಗದಗದ ಜೆ.ಟಿ.ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿ, 1983ರಲ್ಲಿ ಬನಾರಸ ಹಿಂದೂ ವಿಶ್ವವಿದ್ಯಾಲಯದ ಕನ್ನಡ ಪೀಠದ ಪ್ರಾಧ್ಯಾಪಕರಾದರು. ಹೀಗೆ ಕರ್ನಾಟಕದ ಒಳಗೂ ಹಾಗೂ ಹೊರಗೂ ಕನ್ನಡ ಕಟ್ಟುವ ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡು ಮಹತ್ತರವಾದ ಕೊಡುಗೆ ನೀಡಿದ ಘನವಿದ್ವಾಂಸರು ವಿ.ಶಿವಾನಂದರು.

ಶಿವಾನಂದರ ಸಾಹಿತ್ಯ ಸೃಷ್ಟಿ ವಿಪುಲವಾದದ್ದು, ಆಳವಾದದ್ದು. ಹಳಗನ್ನಡ, ಜಾನಪದ, ಶಾಸನಶಾಸ್ತ್ರ, ಭಾಷಾಶಾಸ್ತ್ರ, ದ್ರಾವಿಡ ಭಾಷಾವಿಜ್ಞಾನ, ವ್ಯಾಕರಣ, ವೀರಶೈವ ಸಾಹಿತ್ಯ, ಸಂಸ್ಕೃತಿ ಅಧ್ಯಯನ, ಜೀವನ ಚರಿತ್ರೆ, ಹಸ್ತಪ್ರತಿಶಾಸ್ತ್ರ,

ಸಂಶೋಧನೆ, ಗ್ರಂಥಸಂಪಾದನೆ ಮುಂತಾದ ಬಹು ವಿಷಯಗಳ ಬಗ್ಗೆ ಅಪಾರ ಪಾಂಡಿತ್ಯ ಹೊಂದಿದ್ದ ಶ್ರೀಯುತರು 35ಕ್ಕೂ ಹೆಚ್ಚು ಗ್ರಂಥ ಗಳನ್ನು ರಚಿಸಿರುವುದಲ್ಲದೆ, ನೂರಾರು ಬಿಡಿಲೇಖನಗಳನ್ನು ಬರೆದಿದ್ದಾರೆ. 'ಸೀಮಾಪುರುಷ ಷಡಕ್ಷರದೇವ'(1966), ಸಗರನಾಡಿನ ಶಿವಶರಣರು(1967), ಅಮಾತ್ಯ ಶಿರೋಮಣಿ ಲಕ್ಕಣ್ಣ ದಂಡೇಶ(1970), ಶತಮಾನದ ಕನ್ನಡ ಸಾಹಿತ್ಯ ಚರಿತ್ರೆ(1977), ಕನ್ನಡ ಸಾಹಿತ್ಯಕ್ಕೆ ಗದುಗಿನ ಕಾಣಿಕೆ, ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ(1978), ಕಲಬುರ್ಗಿ ಜಿಲ್ಲೆಯ ಶಿಲಾಶಾಸನಗಳು(1978), ಹೈದರಾಬಾದ ಕರ್ನಾಟಕ ಭಾಗದ ಕನ್ನಡ ಶಿಲಾಶಾಸನಗಳು(1992) ಎಂಬ ಸಂಶೋಧನಾ ಕೃತಿಗಳನ್ನು ರಚಿಸಿದ್ದಾರೆ. ಶ್ರೀ ಮಲ್ಲಿಕಾರ್ಜುನ ಕವಿ ವಿರಚಿತ ಶ್ರೀ ಕಿರೀಟೇಶ್ವರ ಪುರಾಣ, ಸಂಗನಬಸವ ದೇಸಿಕ ವಿರಚಿತ ಶ್ರೀ ಗುರುನಂಜೇಶ್ವರ ಪುರಾಣ, ಕವಿ ಚೆನ್ನ ವಿರಚಿತ ಗುಂಡಬ್ರಹ್ಮಯ್ಯಗಳ ಚರಿತ್ರೆ, ಜೇವರ್ಗಿ ಜ್ಯೋತಿ, ವಿರಕ್ತ ತೋಂಟದಾರ್ಯ ವಿರಚಿತ ಕರ್ನಾಟಕ ಶಬ್ದಮಂಜರಿ, ಶ್ರೀ ಅಣಿವೀರಭದ್ರೇಶ್ವರ ಪುರಾಣ ಮೊದಲಾದ ಕೃತಿಗಳನ್ನು ಸಂಪಾದಿಸಿದ್ದಾರೆ. 'ಉತ್ತರ ಭಾರತದ ಕನ್ನಡ ಹಸ್ತಪ್ರತಿ ಇತರ ದಾಖಲೆಗಳ ಸೂಚಿ' ಎಂಬ ಗ್ರಂಥಸೂಚಿ ಕೃತಿಯು ಔತ್ತರೇಯ ಭಾರತದಲ್ಲಿನ ಕನ್ನಡ ಪಾರಂಪರಿಕ, ಸಾಂಸ್ಕೃತಿಕ, ಭಾಷಿಕ ಹಾಗೂ ಸಾಹಿತ್ಯಕ ಸಂಗತಿಗಳನ್ನು ಕುರಿತು ಅಮೂಲ್ಯವಾದ ಮಾರ್ಗದರ್ಶಿಯಾಗಿದೆ.

ಶಬ್ದಮಣಿದರ್ಪಣ ವಿಳಾಸ(1972), ಭಾಷಾವೈಜ್ಞಾನಿಕ ನೆಲೆಯಲ್ಲಿ ಪದಗಳ ಚರಿತ್ರೆ(1987), ಕನ್ನಡ ಆಕೃತಿಮಾ(1987), ಶಬ್ದಮಣಿದರ್ಪಣದಲ್ಲಿ ಗ್ರಾಂಥಿ–ಕ–ವ್ಯಾವಹಾರಿಕ ಶೈಲಿಗಳು(1992), ತೌಲನಿಕ ದ್ರಾವಿಡ ಭಾಷಾ ವಿಜ್ಞಾನ(1999), ಕಲಬುರ್ಗಿ ಕನ್ನಡ, ಜಾನಪದ ಭಾಷೆ–ಅವಲೋಕನ, ಹರಿಹರನ ಭಾಷೆ–ಒಳನೋಟ, ಶಬ್ದಮಣಿ ದರ್ಪಣ: ಅಂದು ಇಂದು, ಶಾಸನಗಳ ಭಾಷಿಕ ವಿಚಾರ, ವಚನ ಸಾಹಿತ್ಯದಲ್ಲಿ ಸಮಾಜೋಭಾಷಿಕ ಚಿಂತನೆಗಳು (2003), Studies in Kannada Socio-Linguistics (1994) ಮೊದಲಾದುವು ಭಾಷಾವಿಜ್ಞಾನ ಮತ್ತು ವ್ಯಾಕರಣ ಕ್ಷೇತ್ರಕ್ಕೆ ವಿ.ಶಿವಾನಂದರು ನೀಡಿರುವ ಅನುಪಮವಾದ ಕಾಣ್ಕೆಗಳಾಗಿವೆ. ವ್ಯಾಕರಣ ಮತ್ತು ಭಾಷಾವಿಜ್ಞಾನ ಡಾ.ವಿ.ಶಿವಾನಂದ ಅವರ ವಿಶೇಷ ಪ್ರೀತಿಯ ಕ್ಷೇತ್ರ, ಪಾರಂಪರಿಕ ವ್ಯಾಕರಣ ಮತ್ತು ಆಧುನಿಕ ಭಾಷಾವಿಜ್ಞಾನಗಳನ್ನು ತುಂಬ ಗಂಭೀರ ಅಧ್ಯಯನಕ್ಕೆ ಒಳಪಡಿಸಿ ತೌಲನಿಕ ವಿವೇಚನೆ ಕೈಕೊಂಡ ಕೆಲವೇ ವಿದ್ವಾಂಸರಲ್ಲಿ ಡಾ.ವಿ.ಶಿವಾನಂದ ಅವರ ಹೆಸರು ಎದ್ದು ಕಾಣುವಂತಹದಾಗಿದೆ. ಎಂ.ಎ. ಪದವಿ ಪಡೆದು ಅಧ್ಯಾಪಕವೃತ್ತಿ ಆರಂಭಿಸಿದ ತರುಣದಲ್ಲಿಯೇ ಶಬ್ದಮಣಿದರ್ಪಣವನ್ನು ಕುರಿತು ಆಳವಾದ ಅಧ್ಯಯನ ನಡೆಸಿ ರಚಿಸಿದ 'ಶಬ್ದಮಣಿದರ್ಪಣ ವಿಳಾಸ' ಎಂಬ ಕೃತಿ ವಿದ್ವಾಂಸರ ಗಮನವನ್ನು ವಿಶೇಷವಾಗಿ ಸೆಳೆಯಿತು. ವಿದ್ಯಾರ್ಥಿಗಳಿಗೆ ನಿರಂತರ ಅಧ್ಯಯನ ಯೋಗ್ಯ ಕೃತಿಯಾಗಿ ಬಳಕೆಯಲ್ಲಿ ಬಂದಿತು. ಶಬ್ದಮಣಿದರ್ಪಣ ಕಬ್ಬಿಣದ ಕಡಲೆ ಎಂಬ ಹೇಳಿಕೆಯನ್ನು ಸುಳ್ಳಾಗಿಸಿತು. ಹಾಗೆಯೆ ಭಾಷೆ–ವ್ಯಾಕರಣಗಳಿಗೆ

ಸಂಬಂಧಿಸಿ ಬರೆದ ಇಪ್ಪತ್ತಕ್ಕೂ ಹೆಚ್ಚು ಇತರ ಲೇಖನಗಳು ಈ ಕ್ಷೇತ್ರದ ಮೇಲೆ ಹೊಸಬೆಳಕು ಚೆಲ್ಲುವಲ್ಲಿ ಸಹಕಾರಿಯಾಗಿವೆ.

ಡಾ.ವಿ.ಶಿವಾನಂದ ಅವರು ನೂರಕ್ಕೂ ಹೆಚ್ಚು ಲೇಖನಗಳನ್ನು ಬರೆದಿದ್ದಾರೆ. ಈಗಾಗಲೇ ವಿದ್ವಾಂಸರು ಗುರುತಿಸಿರುವಂತೆ, "ನೂತನ ಕ್ಷೇತ್ರಗಳ ಶೋಧ, ವ್ಯಾಪಕ ಅಧ್ಯಯನ, ವಿಪುಲ ಆಕರ ಸಾಮಗ್ರಿ ಸಂಗ್ರಹ, ಗಂಭೀರ ಚಿಂತನೆ, ವ್ಯವಸ್ಥಿತ ನಿರೂಪಣೆಯಿಂದ ಕೂಡಿದ ಅವು ಕನ್ನಡ ಸಂಶೋಧನ ಕ್ಷೇತ್ರದಲ್ಲಿ ಗಟ್ಟಿಯಾಗಿ ನಿಲ್ಲುವ ಶಕ್ತಿ ಮತ್ತು ಸತ್ವಗಳನ್ನು ಪಡೆದುಕೊಂಡಿವೆ." ಇಂತಹ ವಿದ್ವತ್ಪೂರ್ಣ ಸಂಶೋಧನ ಲೇಖನಗಳು ಯುವ ಪೀಳಿಗೆಯ ಸಂಶೋಧಕರಿಗೆ ಮಾರ್ಗದರ್ಶಕ–ಮಾದರಿಯ ಬರಹಗಳಾಗಿ ಬಹುಮುಖ್ಯ ಸಂಪನ್ಮೂಲಗಳನ್ನು ಒದಗಿಸುತ್ತಿವೆ. ಕೊಂಡಗುಳಿ ಕೇಶಿರಾಜ, ಶಂಕರದಾಸಿಮಯ್ಯ, ಹರಿಹರ, ಜಕ್ಕಣಾರ್ಯ, ಷಣ್ಮುಖ ಶಿವಯೋಗಿ, ಷಡಕ್ಷರದೇವ, ನಿರ್ವಾಣಿ ಬೋಳೇಶ– ಮೊದಲಾದವು ವ್ಯಕ್ತಿಕೇಂದ್ರಿತ ಬರಹಗಳಾದರೆ, ಹರಳಯ್ಯಗಳ ವಾದ ಖಂಡನ ಚೌಪದನ, ಬಸವಲಿಂಗ ಶರಣರ ಗುರುಕರುಣ ತ್ರಿವಿಧಿ ಒಂದು ವಿವೇಚನೆ, ಪುಲಿಗೆರೆ ಮಹಾಲಿಂಗದೇವನ ಅಭವಕಂದ, ಪಾಲ್ಕುರಿಕೆ ಸೋಮನಾಥ ನ ಶೀಲಸಂಪಾದನೆ, ತಾತ್ವಿಕ ಚಿಂತನೆಯ ಉದ್ಧೃಕೃತಿ ಲಿಂಗಚಿದಮೃತಬೋಧೆ ಮೊದಲಾದವು ಕೃತಿಕೇಂದ್ರಿತ ರಚನೆಗಳೆನಿಸಿವೆ. ಬಸವಣ್ಣನವರ ಬಹುಲಿಪಿಜ್ಞತೆ– ದೇವಲಿಪಿ ಒಂದು ಟಿಪ್ಪಣಿ, ಪ್ರಭುದೇವರು ಹುಟ್ಟಿನಿಂದ ಶೂದ್ರನೆ?– ಒಂದು ಪ್ರತಿಕ್ರಿಯೆ, ಸರ್ವಜ್ಞ ವಿರತಮಹಾಲಿಂಗದೇವ ಗುರು–ಶಿಷ್ಯರಲ್ಲ, ಗುಂಡಬ್ರಹ್ಮಯ್ಯರ ಐತಿಹ್ಯ, ಶೂನ್ಯಸಿಂಹಾಸನ ಒಂದು ಸಂಪ್ರದಾಯವೆ?–ಒಂದು ವಿವೇಚನೆ, ಸಿಂಧೂಕೊಳ್ಳದ ಶಿವ, ಶಿವಧರ್ಮ ಮತ್ತು ಸಂಸ್ಕೃತಿ, 12ನೆಯ ಶತಮಾನ ಪೂರ್ವದ ಶೈವ ಕುರುಹುಗಳು, ಕಾಶಿ ಜಂಗಮವಾಡಿ ಮಠದ ಸಾಂಸ್ಕೃತಿಕ ಕೊಡುಗೆ, ಮಧುಕೇಶ್ವರ ದೇವಾಲಯದ ಶರಣರ ವಿಗ್ರಹಗಳು– ಮೊದಲಾದವು ಸಾಂಸ್ಕೃತಿಕ ಶೋಧದ ಮಾದರಿಗಳೆನಿಸಿವೆ. ವೀರಶೈವ ಶೀಲಗಳು, ಅಷ್ಟಾವರಣಗಳಲ್ಲಿ ದಾಸೋಹ, ಶಿವಯೋಗ ಆಧುನಿಕ ಪರಿಭಾವನೆ, ಷಣ್ಮುಖ ಶಿವಯೋಗಿಯ ದೃಷ್ಟಿಯಲ್ಲಿ ಜಂಗಮ ಮೊದಲಾದವು ತಾತ್ವಿಕ ಬರಹಗಳಾಗಿವೆ. ಕಾಲಜ್ಞಾನ ಸಾಹಿತ್ಯ, ವೀರಶೈವ ಸಾಹಿತ್ಯ, ವೀರಶೈವ–ಹದಿನೈದನೆಯ ಶತಮಾನ, ವಚನ ಸಾಹಿತ್ಯದ ಪುನರುತ್ಥಾನ, ಹರಿಹರ ಕವಿಯು ಚಿತ್ರಿಸಿದ ಶರಣರು, ಕನ್ನಡ ಸಾಹಿತ್ಯದ ಮೇಲೆ ಷಡಕ್ಷರದೇವನ ಪ್ರಭಾವ, ಕರ್ನಾಟಕದ ಅನುಭಾವಿ ಕವಿಗಳು, –ಇತ್ಯಾದಿ ಸಾಹಿತ್ಯ ಚರಿತ್ರೆಗೆ ಸಂಬಂಧಿಸಿದ ಲೇಖನಗಳಾಗಿವೆ.

ಹೈದರಾಬಾದ ಕರ್ನಾಟಕ ಭಾಗದ ಕನ್ನಡ ಶಿಲಾಶಾಸನಗಳು, ತಿಂಥಿಣಿ ಮೋನೇಶ್ವರನ ತಾಮ್ರಶಾಸನ, ಕರ್ನಾಟಕ ರಾಜಕೀಯ ಚರಿತ್ರೆ, ಪ್ರೌಢದೇವರಾಯ, ಉತ್ತರ ಭಾರತದಲ್ಲಿ ಕನ್ನಡ ಅಧ್ಯಯನ ಹಾಗೂ ಹೆಚ್ಚಿನ ಸಂಶೋಧನೆಗೆ ಅವಕಾಶಗಳು, ಕನ್ನಡ ಸಾಹಿತ್ಯಕ್ಕೆ ಪುಲಿಗೆರೆಯ ಕಾಣಿಕೆ, ಕಾರ್ನಾಡರ ತಲೆದಂಡ ನಾಟಕದಲ್ಲಿ ಅಸ್ತಿತ್ವವಾದ, ಶಾಂತರಸರ ಕಥೆಗಳಲ್ಲಿ ಸಾಮಾಜಿಕ ಭಾಷಾಶೈಲಿ

ಪ್ರಭೇದಗಳು–ಮೊದಲಾದ ಲೇಖನಗಳು ಶಾಸನ–ಚರಿತ್ರೆ–ಸಂಶೋಧನೆ–ವಿಮರ್ಶೆಗಳಿಗೆ ಸಂಬಂಧಿಸಿದ ಮಹತ್ವದ ಲೇಖನಗಳಾಗಿವೆ. ಜಾನಪದ ಕು–ರಿತಂತೆ ಶಿಷ್ಟಪದ–ಶಿಷ್ಟ ಜನಪದ ಹಾಗೂ ಜನಪದ ಕಾವ್ಯಗಳ ಪುನರ್ ವಿರಚನೆ–ಒಂದು ತೌಲನಿಕ ದೃಷ್ಟಿ, ಒಕ್ಕಲಿಗ, ಕಾಲಜ್ಞಾನ ಸಾಹಿತ್ಯ ಮತ್ತು ಅದರ ಜಾನಪದ ಧೋರಣೆಗಳು, ಮೇಳಾಪ–ಒಂದು ಜನಪದ ಬಯಲು ಕುಣಿತ, ಒಕ್ಕಲುತನ ವೃತ್ತಿಪದಕೋಶ, ಎಲೆಬಳ್ಳಿ ತೋಟದ ವೃತ್ತಿಪದಗಳು ಎಂಬ ಲೇಖನಗಳು ಈ ಕ್ಷೇತ್ರಕ್ಕೆ ಕೊಟ್ಟ ಮೌಲಿಕ ಕೊಡುಗೆಗಳೆನಿಸಿವೆ. ಹೀಗೆ, ಡಾ.ವಿ.ಶಿವಾನಂದ ಅವರು ನೂರಕ್ಕೂ ಹೆಚ್ಚು ಲೇಖನಗಳನ್ನು ಬರೆದಿದ್ದಾರೆ. ವಿಷಯ ವೈವಿಧ್ಯದಿಂದ ಕೂಡಿರುವ ಈ ಲೇಖನಗಳನ್ನು ಗಮನಿಸಿದಾಗ ಲೇಖಕರ ತಲಸ್ಪರ್ಶಿಜ್ಞಾನ ಎಂಥವರಿಗೂ ಗೋಚರಿಸುತ್ತದೆ. ನೂತನ ಕ್ಷೇತ್ರಗಳ ಶೋಧ, ವ್ಯಾಪಕ ಅಧ್ಯಯನ, ವಿಪುಲ ಆಕರ ಸಾಮಗ್ರಿ ಸಂಗ್ರಹ, ಗಂಭೀರ ಚಿಂತನೆ, ವ್ಯವಸ್ಥಿತ ನಿರೂಪಣೆಯಿಂದ ಕೂಡಿದ ಅವು ಕನ್ನಡ ಸಂಶೋಧನ ಕ್ಷೇತ್ರದಲ್ಲಿ ಗಟ್ಟಿಯಾಗಿ ನಿಲ್ಲುವ ಶಕ್ತಿ ಮತ್ತು ಸತ್ವಗಳನ್ನು ಪಡೆದುಕೊಂಡಿವೆ. ಯುವ ಪೀಳಿಗೆಯ ಸಂಶೋಧಕರಿಗೆ ಮಾರ್ಗದರ್ಶಕ–ಮಾದರಿಯ ಬರಹಗಳಾಗಿ ಬಹುಮುಖ್ಯ ಸಂಪನ್ಮೂಲಗಳನ್ನು ಒದಗಿಸುತ್ತಿವೆ.

ಪ್ರಸ್ತುತ 'ಔತ್ತರೇಯ ಭಾರತೀಯ ಭಾಷೆಗಳಲ್ಲಿ ಕರ್ನಾಟಕ ಸಂಸ್ಕೃತಿಯ ಕೆಲವು ಉಲ್ಲೇಖಗಳು' ಎಂಬ ಲೇಖನವು ಉತ್ತರ ಮತ್ತು ದಕ್ಷಿಣ ಭಾರತಗಳ ನಡುವಿನ ಕನ್ನಡ ನಾಡುನುಡಿಯ ಸಾಂಸ್ಕೃತಿಕ ಮೈತ್ರಿಯಾನವನ್ನು ಸಾಕ್ಷೀಕ–ರಿಸುವಂಥದ್ದಾಗಿದೆ. ಸಂಸ್ಕೃತ, ಪಾಲಿ, ಪ್ರಾಕೃತ, ಅಪಭ್ರಂಶ, ಓರಿಯಾ, ಮರಾಠಿ ಮತ್ತು ಹಿಂದಿ ಭಾಷೆಯ ಗ್ರಂಥಗಳಲ್ಲಿ ಉಲ್ಲೇಖವಾದ ಕರ್ನಾಟಕ ಸಂಸ್ಕೃತಿಗೆ ಸಂಬಂಧಿಸಿದ ಅಂಶಗಳನ್ನು ಸಂಗ್ರಹಿಸಿ, ಅದರ ಪ್ರಾಚೀನತೆ ಪ್ರಬುದ್ಧತೆ ಮತ್ತು ಪ್ರಸಿದ್ಧಿಗಳನ್ನು ಎತ್ತಿಹೇಳಲಾಗಿದೆ. ವೇದಪೂರ್ವಕಾಲೀನ ಕರ್ನಾಟಕ ಸಂಸ್ಕೃತಿಯ ಸುಳುಹುಗಳಿಂದ ಆರಂಭಿಸಿ, ಮುಂದೆ ವೇದ ಪುರಾಣ ಕಾಲಗಳಲ್ಲಿ ಅದು ಹೇಗೆ ಸ್ಪಷ್ಟರೂಪವನ್ನು ತೋರುತ್ತ ಬಂದಿತು ಎಂಬುದನ್ನು ಕರ್ನಾಟಕದ ಆಳರಸರ ಚರಿತ್ರೆ, ಕರ್ನಾಟಕದ ಕಲೆಗಳು, ಧರ್ಮಪರಂಪರೆ, ಭಕ್ತಿಪಂಥಗಳ ಪ್ರಸಾರ–ಪ್ರಭಾವಗಳ ಹಿನ್ನೆಲೆಯಲ್ಲಿ ಗುರುತಿಸಲು ಪ್ರಯತ್ನಿಸಿರುವುದು ಕನ್ನಡ ಸಂಸ್ಕೃತಿಯಾನಕ್ಕೆ ಸಂಬಂಧಿಸಿದ ನವನವೀನ ಸಂಗತಿಗಳ ದಾಖಲೀಕರಣವೂ ಹೌದು, ದಾರಿದೀಪವೂ ಹೌದು.

ಕನ್ನಡಕ್ಕೆ ಸಂಬಂಧಿಸಿದಂತೆ 'ದೇಶ–ಭಾಷೆ–ಜನಾಂಗ' ವಾಚಿ ಯಾದ ಉಲ್ಲೇಖಗಳನ್ನು ಬಿಡಿಬಿಡಿಯಾಗಿ ನಿಷ್ಪನ್ನಗೊಳಿಸುವದು ವಿದ್ವಾಂಸರಲ್ಲಿ ವಾಡಿಕೆಯಾಗಿದೆ. ಈ ಬಗೆಯ ಪೃಥಃಕರಣ ಧೋರಣೆ ಕೇವಲ ಅಧ್ಯಯನವನ್ನು ಸುಲಭಗ್ರಾಹ್ಯವಾಗಿಸುವದಕ್ಕಾಗಿಯೇ ಹೊರತು ಒಂದು ನಾಡಿನ ಅಖಂಡವೂ ಅವ್ಯಾಹತವೂ ಆದ, ಅಲ್ಲದೆ ಪರಸ್ಪರ ಸಂಸ್ಕೃತಿಗಳ ಸಂಪರ್ಕ, ಸಂಲಗ್ನೀಕರಣ ಹಾಗೂ ಪ್ರಸರಣಗಳ ದೃಷ್ಟಿಯಿಂದ ತೀರಾ ಸಂಕುಚಿತ ವ್ಯಾಪ್ತಿಯದಾಗುತ್ತದೆ. ಆದುದರಿಂದ ಇವೆಲ್ಲ ವ್ಯಷ್ಟಿಗಳನ್ನೊಳಗೊಂಡು ಕನ್ನಡ ಜನಾಂಗದ ಸಮಷ್ಟಿ ಜೀವನ ದೃಷ್ಟಿ, ಪರಂಪರೆ–ಪ್ರಸಾರ ಹಾಗೂ ಪ್ರಭಾವಾದಿಗಳ ನೆಲೆಗಟ್ಟಿನಲ್ಲಿ ಕರ್ನಾಟಕ ಸಂಸ್ಕೃತಿಯನ್ನು ಅರ್ಥೈಸಿಕೊಳ್ಳಬೇಕಾದುದು ಇಂದು ಅಗತ್ಯವೆನ್ನಿಸಿದೆ. ಇದರಲ್ಲಿ ಕಾಲಕಾಲಕ್ಕೆ ಬದಲಾಗಿರುವ ಭೌತ ನಾಗರಿಕತೆಯ ಅಂಶಗಳೂ ಸೇರಿದಂತೆ ಸ್ಥಿರೀಕೃತವಾದ ಬಾಳಿನ ಮೌಲ್ಯಪರಂಪರೆ, ಆಚರಣೆಗಳೂ ಸಹ ಸಮಾವೇಶಗೊಳ್ಳಬಹುದಾಗಿದೆ. ಕರ್ನಾಟಕ ಸಂಸ್ಕೃತಿಯ ಈ ರೀತಿಯ ವೈಲಕ್ಷಣ್ಯಗಳನ್ನು, ಅದರ ಸಾಧನೆ, ಸಿದ್ಧಿ, ಪ್ರಭಾವಗಳನ್ನು ಔತ್ತರೇಯ ಭಾರತೀಯ ಭಾಷೆ–ಕೃತಿಗಳ ಸಂದರ್ಭದಲ್ಲಿ ಗುರುತಿಸುವದು ಇಲ್ಲಿನ ಉದ್ದೇಶವಾಗಿದೆ.

**ವೇದಪೂರ್ವಕಾಲೀನ ಕರ್ನಾಟಕ ಸಂಸ್ಕೃತಿ:** ಆರ್ಯಪೂರ್ವ ಜನಾಂಗವಾದ ದ್ರಾವಿಡದಿಂದ ಕುಡಿಯೊಡೆದ ಕರ್ನಾಟಕ ಸಂಸ್ಕೃತಿಯ ಮೂಲನೆಲೆಗಳನ್ನು ನಾವು ಸಿಂಧೂಕೊಳ್ಳದ ನಾಗರಿಕತೆ–ಸಂಸ್ಕೃತಿಯ ಕಾಲದಿಂದಲೇ ಕಂಡುಕೊಳ್ಳಬಹುದು. ಅದರ ಲಿಖಿತ ಪ್ರಮಾಣಗಳು ವೇದ–ಉಪನಿಷತ್ತುಗಳ ಕಾಲದಿಂದೀಚೆಗೆ ಲಭ್ಯವಾಗುತ್ತವೆಯೆಂಬುದು ನಿಜ. ಸಿಂಧೂಲಿಪಿಯ ಓದು ಚರ್ಚಾಸ್ಪದವಾಗಿ ಉಳಿದಿರುವದೇ ಇದಕ್ಕೆ ಕಾರಣ. ಏನಿದ್ದರೂ 2000ಕ್ಕೂ ಮಿಕ್ಕಿದ ಸಂಖ್ಯೆಯಲ್ಲಿ ಸಿಕ್ಕಿರುವ ಅಲ್ಲಿನ ಮುದ್ರೆ (Seal)ಗಳ ಆಧಾರದ ಮೇಲಿಂದ ದ್ರಾವಿಡ ಬುಡಕಟ್ಟಿನವರು ತಮ್ಮದೇ ಆದ ಲಿಪಿ, ಭಾಷೆ ಹಾಗೂ ಬೌದ್ಧಿಕ ಸಂಸ್ಕೃತಿಯನ್ನು ಹೊಂದಿದ್ದರೆಂಬುದು ಖಚಿತ–ನಿಚಿತ. ದ್ರಾವಿಡ ಸಂಸ್ಕೃತಿಯ ಆರಂಭಿಕ ಅಧ್ಯಯನದಲ್ಲಿ ಸರ್ ಜಾನ್ ಮಾರ್ಷಲ್, ಡಾ. ಸೆಯ್ಸ್, ಡಾ. ಹಾಲ್, ಫಾದರ್ ಹೆರಾಸ್, ಡಾ. ಕಾಲ್ಡವೆಲ್‌ರು ಮುಖ್ಯರಾಗಿದ್ದಾರೆ. ಇವರಲ್ಲಿ ಫಾದರ್ ಹೆರಾಸ್ ಅಲ್ಲಿ 'ಕಣ್' ಎಂಬ ಜನಾಂಗವಿದ್ದಿತೆಂದೂ ಮಹೆಂಜೊದಾರೊದಲ್ಲಿನ ಈ ಸಂಕೇತವಾದ ಶಾಸನೈಕ ಚಿತ್ರಲಿಪಿಯು 'ಕಣ್ಣನಿರ್' ಜನಾಂಗದ ಪ್ರತೀಕವೆಂದೂ ಅವರೇ 'ಕನ್ನಡಿಗ'ರೆಂದೂ ಇದೇ ರೂಪಾಂತರ ಗೊಂಡು ಸಂಸ್ಕೃತದಲ್ಲಿ 'ಕರ್ನಾಟ'ವಾಗಿರುವದಾಗಿಯೂ ಸಂಭಾವಿಸಿದ್ದಾರೆ. ಇವರ ಊಹೆಗೆ ಮತ್ಸ್ಯಪುರಾಣ ಹಾಗೂ ಮನುಸ್ಮೃತಿಗಳಲ್ಲಿ ಆಧಾರ ದೊರೆಯುವದರಿಂದ ಇದನ್ನು ಕೇವಲ ಒಂದು 'Myth' ಎನ್ನುವದಕ್ಕೆ

ಸಾಧ್ಯವಾಗುವದಿಲ್ಲ. ಕನ್ನಡದ ಅನೇಕ ಪಂಡಿತರು ಫಾದರ್ ಹೆರಾಸರ ಈ ನಿಲುಮೆಯನ್ನು ಸಮರ್ಥಿಸಿರುವುದೂ ಉಂಟು.

ಪೂರ್ವದ 'ಕಣ್ಣರ್' ಜನಾಂಗ, ದ್ರಾವಿಡವೆಂದು ಸಮ್ಮತಿಸಿದ್ದಾದರೆ ಇವರೂ ಸಹ ಮೆಡಿಟೇರಿನಿಯನ್‌ದಿಂದ ಹೊರಟು ಭಾರತದ ವಾಯುವ್ಯ ಭಾಗದಲ್ಲಿ ಆರ್ಯರಿಗಿಂತ ಪೂರ್ವಭಾವಿಯಾಗಿ ಬಂದು ನೆಲಸಿದಾಗ ಅಲ್ಲಿ ಅದಕ್ಕಿಂತ ಪೂರ್ವದಲ್ಲಿಯೇ ವಾಸವಾಗಿದ್ದ ಪ್ರೊಟೊ–ಆಸ್ಟ್ರಲಾಯ್ಡ್ ಜನಾಂಗದ ಸಂಪರ್ಕಕ್ಕೊಳಗಾದರು.[1] ಅನಂತರ ಪ್ರವೇಶಿಸಿದ ಆರ್ಯರು ದ್ರಾವಿಡರೊಡನೆ ಸಂಪರ್ಕಕ್ಕಿಳಿದರು. ಈ ಸ್ಪರ್ಧೆಗಳು ಕಾಲಕ್ರಮದಲ್ಲಿ ಕ್ಷೀಣವಾಗಿ ಪಾರಸ್ಪ–ರಿಕ, ಸಾಂಸ್ಕೃತಿಕ, ಧಾರ್ಮಿಕ, ಕಲೆ, ವೃತ್ತಿ–ವ್ಯವಸಾಯಗಳ ಕೊಡು–ಕೊಳೆ ಸಾಧ್ಯವಾಯಿತು. ದ್ರಾವಿಡರು ಅಲ್ಲಿಂದ ಉತ್ತರ–ಪೂರ್ವ ಮಧ್ಯ ಹಾಗೂ ದಕ್ಷಿಣ ಭಾರತದ ಕಡೆಗೆ ಸಂಚರಿಸುತ್ತ ಬಂದರಾದರೂ ತಮ್ಮ ಸಾಂಸ್ಕೃತಿಕ ಕುರುಹುಗಳನ್ನು ಮೂಲದ ನೆಲೆಗಳಲ್ಲಿ ಆಗಲೇ ಸ್ಥಾಪಿಸಿದ್ದರು. ಆರ್ಯರು ಸ್ವೀಕರಿಸಿರುವ ದ್ರಾವಿಡ ನಾಗರಿಕತೆ–ಸಾಂಸ್ಕೃತಿಕ ಅಂಶಗಳನ್ನು ಸಾಂಸ್ಕೃತಿಕ ಮಾನವ ವಿಜ್ಞಾನಿಗಳೇ ಈಗ ಎತ್ತಿ ಹೇಳುತ್ತಾರೆ.[2] ಹೂಗಳಿಂದರ್ಚಿಸಿ ಪೂಜೆ ಸಲ್ಲಿಸುವದೇ 'ಪೂಜೆ' (ಪೂ+ಸೆಯ್), ಶಬ್ದಮಣಿದರ್ಪಣದ ಒಂದು ಪ್ರಯೋಗದಲ್ಲಿ 'ಪೂವಿಂದರ್ಚಿಸಿದಂ' ಎಂದಿದೆ. ಈ ಬಗೆಯ ಪೂಜಾಪದ್ಧತಿ ಮೂಲತಃ ದ್ರಾವಿಡರದಾಗಿತ್ತು. ದ್ರಾವಿಡರ ದೇವತಾರ್ಚನ ಪದ್ಧತಿ, ದೇವತಾಪ್ರತಿಮೆ ಪ್ರತಿಷ್ಠಾಪನ, ಗಂಧಾರ್ಚನ, ಧೂಪ, ದೀಪ, ನರ್ತನಸೇವೆ ಮುಂತಾದ 'ಷೋಡಶೋಪಚಾರ' ಕ್ರಮಗಳೆಲ್ಲವೂ ದ್ರಾವಿಡರಿಂದ ಆರ್ಯರು ಸ್ವೀಕರಿಸಿರುವ ಅಂಶಗಳು. ಆರ್ಯರಲ್ಲಿ ಆರ್ಯೇತರವಾದ ರುದ್ರ (ಶಿವ), ಉಮೆ, ಕಾರ್ತಿಕೇಯ, ಹನುವಂತ, ಶೀತಲಾದೇವಿ ಹಾಗೂ ಗಣೇಶ ಅಲ್ಲದೆ ಗ್ರಾಮದೇವತೆ, ಕುಲದೇವತೆ ಹೀಗೆ ದೈವರುಗಳ ಸಂಖ್ಯೆ ಹೆಚ್ಚಿರುವದೂ ಸಹ ದ್ರಾವಿಡರಿಂದಲೇ. ಆರ್ಯರು ಮೂಲತಃ ಯಜ್ಞ–ಯಾಗಗಳನ್ನಷ್ಟೇ ಬಲ್ಲವರಾಗಿದ್ದವರು. ಪದ್ಮ, ಸ್ಕಂದ, ಶಿವ, ವಾಮನಾದಿ ಪುರಾಣಗಳಲ್ಲಿ ಆರ್ಯರು ರುದ್ರ–ಶಿವೋಪಾಸನೆಯಿಂದ ದೂರವಿರುತ್ತಿದ್ದಾಗ ಆರ್ಯಋಷಿಗಳೊಡನೆ ವಿವಾಹವಾದ ದ್ರಾವಿಡ ಪತ್ನಿಯರು ಹೇಗೆ ಅವರಲ್ಲಿ ರುದ್ರ–ಶಿವದೇವತಾ ಪ್ರತಿಷ್ಠೆ ಪ್ರಭಾವಗಳನ್ನು ಬೀರಲು ಕಾರಣ–ರಾದರೆಂಬ ವಿವರಗಳು ನಮಗೆ ದೊರೆಯುತ್ತವೆ. ಇದಲ್ಲದೆಯೆ ನದಿ, ವೃಕ್ಷಗಳ ಪೂಜೆ, ನಿರ್ದಿಷ್ಟ ದೇವತಾ ಮಂದಿರ ಅಥವಾ ಗುಡಿಗಳ ಪರಿಕಲ್ಪನೆ ದ್ರಾವಿಡ–ರಿಂದಲೇ ಆರ್ಯರಿಗೆ ಬಂದೊದಗಿತು. ಬನ್ನಿ, ತುಳಸೀಪತ್ರ, ಆಲ, ಬೇಲದಳಗಳ ಅರ್ಚನೆ, ಮಾತೃ ದೇವೋಪಾಸನೆ ಇವೆಲ್ಲವೂ ದ್ರಾವಿಡರ ಬಳುವಳಿ.

ಸಿಂಧೂ ಸಂಸ್ಕೃತಿಯ ಉತ್ಖನನದ ಆಧಾರಗಳ ಮೇಲಿಂದ ಅದೊಂದು

ಸುಸಭ್ಯವಾದ ಪೌರಸಂಸ್ಕೃತಿಯಾಗಿ ಬೆಳವಣಿಗೆಗೊಂಡಿತ್ತು. ದ್ರಾವಿಡರು ಕಟ್ಟಿಕೊಂಡಿದ್ದ 'ಪುರ'ಗಳನ್ನು ನಾಶಮಾಡಿದ 'ಪುರಂದರ' (=ಇಂದ್ರ) ಆರ್ಯರ ದೇವತೆ. ಆರ್ಯರು ಮೇಲಿಂದ ಮೇಲೆ ಹಲ್ಲೆ ನಡೆಸಿದ್ದರಿಂದ ಅಲ್ಲಿನ ಪುರಗಳು ನಾಶವಾದುವು. ಇದುವರೆಗೆ '80'ಕ್ಕಿಂತ ಹೆಚ್ಚಿನ ಸಿಂಧೂಸಂಸ್ಕೃತಿಯ ಸ್ಥಳ ನಿವೇಶನಗಳನ್ನು ಪುರಾತಜ್ಞರು ಶೋಧಿಸಿರುವದು ಅವರ 'ಪುರಸಂಸ್ಕೃತಿ' ಅಸ್ತಿತ್ವಕ್ಕೆ ನಿದರ್ಶನವಾಗಿದೆ.[3] ಅಲ್ಲಿನ ಆಭರಣಗಳಿಗೆ ಕರ್ನಾಟಕ ಕೋಲಾರ ಗಣಿಯಿಂದ ಬಂಗಾರ ಹಾಗೂ ಅಲಂಕರಣ ಶಿಲೆಗಳಿಗೆ ನೀಲಗಿರಿಯ ದೊಡ್ಡ ಬೆಟ್ಟದ ಪಚ್ಚೆಗಲ್ಲುಗಳೇ ಪೂರೈಕೆಯಾಗಿರುವದಾಗಿಯೂ ಸಹ ರಾಧಾಕುಮುದ ಮುಖರ್ಜಿ ಉಲ್ಲೇಖಿಸುತ್ತಾರೆ. ಕೇವಲ ಭೌತಸಂಸ್ಕೃತಿ (Material Culture) ಮಾತ್ರವಲ್ಲದೆ ಅತ್ಯುನ್ನತವಾದ ಆಧ್ಯಾತ್ಮಿಕ ಸಂಸ್ಕೃತಿ (Spiritual Culture) ಕೂಡ ಅಲ್ಲಿ ವಿಕಾಸಗೊಂಡುದನ್ನು ಕಾಣುತ್ತೇವೆ. ನಿಂತ ಭಂಗಿಯಲ್ಲಿನ 'ಯೋಗಿ', ತ್ರಿಮುಖವಾದ 'ಪಾಶುಪತ ಶಿವ', ಎಲ್ಲಕ್ಕಿಂತ ವಿಲಕ್ಷಣವಾಗಿ ಹಣೆಯಲ್ಲಿ ಕಣ್ಣುಳ್ಳ ಧ್ಯಾನಯೋಗಿಯ ಪ್ರತಿಮೆಗಳು 'ಮುಂಕಣ್' 'ಮೀನ್ ಕಣ್' ರೂಪಗಳಲ್ಲಿ ದೊರಕಿರುವದರಿಂದ ಹಿಂದೂ ಯೋಗದರ್ಶನಕ್ಕೆ ದ್ರಾವಿಡರು ಅತ್ಯಪೂರ್ವವಾದ ಕೊಡುಗೆಯನ್ನಿತ್ತಿರುವರೆಂಬುದು ಸ್ಪಷ್ಟವಾಗುತ್ತದೆ.[4] ರುದ್ರ–ಶಿವೋಪಾಸನೆಯ ಉಗಮ–ವಿಕಾಸಗಳಿಗೆ ಸಿಂಧೂಸಂಸ್ಕೃತಿ ಆಧಾರವಾಗಿರುವದೆಂಬ ಬಗೆಗೆ ಎರಡು ಮತವಿಲ್ಲ. ಇದನ್ನಿಲ್ಲಿ ಹೇಳುವುದಕ್ಕೆ ಮುಖ್ಯ ಕಾರಣವೆಂದರೆ, ಕರ್ನಾಟಕದಲ್ಲಿ ಈಗಲೂ ಜೀವಂತವಾಗಿರುವ ವೀರಶೈವ ಸಂಸ್ಕೃತಿ–ಆಚರಣೆಗಳು. ಎಲ್ಲ ಶೈವ ಪ್ರಭೇದಗಳಲ್ಲಿ 'ಪಾಶುಪತ ಶೈವ'ವೇ ಪ್ರಾಚೀನ. ಕರ್ನಾಟಕದ ವೀರಶೈವವು ಉಳಿದ ಹಲವಾರು ವಾಮಪಂಥೀಯ ಶೈವಶಾಖೆಗಳಲ್ಲಿನ ಆಚರಣೆಗಳನ್ನು ಬಿಟ್ಟು ಪ್ರಪ್ರಾಚೀನವಾದ ಪಾಶುಪತಕ್ಕೆ ತನ್ನ ನಿಷ್ಠೆ–ಒಲವುಗಳನ್ನು ಸೂಚಿಸುವದರಿಂದ ಈ ಜನಾಂಗಕ್ಕೂ ಸೈಂಧವ ಶೈವ ಸಂಬಂಧಿತವಾದ ಸಂಸ್ಕೃತಿಗೂ ಇರುವ ನಿಕಟ ಸಂಬಂಧ ವ್ಯಕ್ತಗೊಳ್ಳುತ್ತದೆ.

ದ್ರಾವಿಡರ ಪ್ರಮುಖ ದೈವವಾದ 'ರುದ್ರ'ನನ್ನು 'ಅನಾರ್ಯ' 'ಅಸುರ' ದೈವವೆಂದು ಆರ್ಯರು ಹೀಗಳೆದರಾದರೂ ಅದಮ್ಯ ಶಕ್ತಿ ಹಾಗೂ ರುದ್ರನ ಪ್ರಚಂಡ ಸಾಮರ್ಥ್ಯಗಳಿಗೆ ಶರಣಾಗತರಾಗಿ ಹೇಗೆ ಆ ದೈವವನ್ನು ಮೊರೆ ಕೇಳಿದರೆಂಬುದಕ್ಕೆ ಋಗ್ವೇದ ಸೂಕ್ತಿಯು ನಮಗೆ ಪ್ರಮಾಣವಾಗುತ್ತದೆ:

**ಸ್ಥಿರೇಭಿರಂಗೈಃ ಪುರು ರೂಪ ಉಗ್ರೋ**
**ಬಭ್ರುಃ ಶುಕ್ರೇಭಿಃ ಪಿಪಿಶೇ ಹಿರಣ್ಯೈಃ**
**ಈಶಾನಾದಸ್ಯ ಭುವನಸ್ಯಭುರೇಃ ನವಾ**

**ಯೋಸದ್ರುದ್ರಾದಸುರ್ಯಮ್ (ಋಗ್–II, 33–9)**

ಈ ಮೇಲಿನ ಅಭಿವರ್ಣನೆಯಷ್ಟಲ್ಲದೆ, ರುದ್ರನಿಗೆ ತಾವು ಪ್ರಜೆಗಳಾಗಿ ಆಳುವದಾಗಿಯೂ ಅವರ ಪಶುಗಳನ್ನು ರಕ್ಷಿಸಬೇಕೆಂದೂ ಭಿಷಜನಾಗಿ ಅವರನ್ನು ರೋಗರುಜಿನಾದಿಗಳಿಂದ ಕಾಪಾಡಬೇಕೆಂದೂ ಯಾಗಗಳಲ್ಲಿ ತಮಗೆ ಭಾಗ ದೊರಕುವಂತೆ ಅನುಗ್ರಹಿಸಬೇಕೆಂದೂ ಆರ್ಯ ಋಷಿಗಳು ರುದ್ರನಲ್ಲಿ ಪ್ರಾರ್ಥಿಸಿಕೊಂಡಿದ್ದಾರೆ.[5] ರುದ್ರದೇವೋತ್ತಮತ್ವ ಹಾಗೂ ರುದ್ರನನ್ನು ಸುತ್ತುವರೆದ ರುದ್ರಗಣವರರು, ವೀರಗಣ, ಮರುದ್ಗಣ ಇವರೆಲ್ಲ ಆರ್ಯರಿಗಿಂತ ಭಿನ್ನವಾದ ಒಂದು ಸಂಸ್ಕೃತಿ ಸಮಾಜ ಸಂಘಟನೆಯನ್ನು ನಿರ್ಮಿಸಿಕೊಂಡಿದ್ದರೆಂಬುದು ಇಲ್ಲಿ ಮನವರಿಕೆಯಾಗುತ್ತದೆ. ಕೇವಲ 'ರುದ್ರ' ಪರವಾದ ಸಾಂಸ್ಕೃತಿಕ ಅಂಶಗಳಲ್ಲದೆ ವೇದಕಾಲದಲ್ಲಿ 'ಸ್ತೇನ'[6] 'ತಾಯು' 'ತಸ್ರ' ಎಂಬಿವು ಆರ್ಯೇತರ ಜನಾಂಗಗಳಾಗಿದ್ದು ಇವರು ಹಟ್ಟಿಗಾರರಾಗಿ, ಇಲ್ಲವೆ ದನಗಳ್ಳರೆಂದು ಪ್ರತೀತಿಯಲ್ಲಿದ್ದ ದ್ರಾವಿಡರು ವಿಶೇಷತಃ 'ಕಳವರ್' 'ಕಣ್ಣರ್' ಜನಾಂಗವೇ ಇದಾಗಿರಬೇಕೆಂದು ಶಂ.ಬಾ. ಜೋಶಿ ತರ್ಕಿಸಿರುವರು.

**ದಕ್ಷಿಣಾಪಥ–ಕರ್ಣಾಟಕ ಸಂಸ್ಕೃತಿಯ ಅಪನಿಂದೆ:** ಆರ್ಯ ಪ್ರಭಾವಿತ ವೈದಿಕ ವಲಯದ ಹೊತ್ತಗೆಗಳಲ್ಲಿ ಇಡೀ ದಕ್ಷಿಣಾತ್ಯರ–ಅದರಲ್ಲಿ 'ಕರ್ಣಾಟ'ರೂ ಸೇರಿದಂತೆ ಒಂದು ಬಗೆಯ ವಿಡಂಬನೆ ಕಂಡುಬರುತ್ತದೆ. ದ್ರಾವಿಡರು 'ಅನಾರ್ಯ' 'ದಾಸ' 'ದಸ್ಯು'ಗಳೆಂದೇ ಅವರ ಪರಿಭಾವನೆಯಾಗಿತ್ತು. ಒಂದು ಪ್ರಬಲ ಸಂಸ್ಕೃತಿ ತನ್ನ ಸ್ವಪ್ರತಿಷ್ಠೆ ಹಾಗೂ ಪ್ರಾಬಲ್ಯಗಳಲ್ಲಿ ಅನ್ಯ ಸಂಸ್ಕೃತಿಯನ್ನು ಹೇಗೆ ಕೀಳರಿಮೆಗೊಳಿಸಬಲ್ಲುದೆಂಬುದಕ್ಕೆ ಆರ್ಯ–ದ್ರಾವಿಡ ಜನಾಂಗದ ಸಂಧಿಕಾಲದ ಸಾಹಿತ್ಯ ನಮಗೆ ಅದೆಷ್ಟೋ ಅವಾಸ್ತವ ಹಾಗೂ ಅದ್ಭುತ ರಮ್ಯ ಕಲ್ಪಕತೆಗಳನ್ನು ಹರಹಿರುವ ಕತೆಗಳಲ್ಲಿ ತೆರೆದು ತೋರುತ್ತದೆ. ಋಗ್ವೇದ, ಮನುಸ್ಮೃತಿ, ರಾಮಾಯಣ, ಮಹಾಭಾರತಗಳಷ್ಟಲ್ಲದೆ, ವೈದಿಕ ಒತ್ತಡದಲ್ಲಿ ರೂಪಿತವಾಗಿರುವ ಸ್ಕಾಂದ ಮಹಾಪುರಾಣ, ವಿಷ್ಣುಧರ್ಮೋತ್ತರ ಮಹಾಪುರಾಣ– ಇವೇ ಮೊದಲಾದ ಪುರಾಣಗಳಲ್ಲಿಯೂ ಸ್ಮೃತಿಚಂದ್ರಿಕಾ, ಮೃಚ್ಛಕಟಿಕಗಳಲ್ಲಿಯೂ ಈ ಬಗೆಯ ಅಪನಿಂದಾತ್ಮಕ ಹೇಳಿಕೆಗಳಿರುವದನ್ನು ನಾವು ಕಾಣುತ್ತೇವೆ. ಕರ್ನಾಟಕ ಪ್ರಾಚೀನ ಉಲ್ಲೇಖಗಳನ್ನು ಅವು ಎಷ್ಟು ಪೂರ್ವದ ದಾಖಲೆಯಾಗಿವೆಯೆಂದು ಬೆಲೆಗೊಡುವದಕ್ಕಿಂತ ಅವನ್ನು ಯಾವ ಸಂದರ್ಭ ಮತ್ತು ಅರ್ಥಗಳಲ್ಲಿ ಪ್ರಯೋಗಿಸಲಾಗಿದೆ, ಅಲ್ಲಿನ ಧೋರಣೆಗಳೇನು? ಎಂಬ ದೃಷ್ಟಿಯಿಂದ ಅರಿಯುವದು ಇಲ್ಲಿ ಮುಖ್ಯವೆನಿಸುತ್ತದೆ.

**ಕರ್ನಾಟಕ ಸಂಸ್ಕೃತಿಯ ಹಿರಿಮೆ:** ಕರ್ನಾಟಕ ದೇಶ, ಜನಾಂಗ, ಭಾಷೆ ಕು–

ರಿತಾದ ಸದುಕ್ತಿಗಳು ಈ ನಾಡಿನ ವಾಸ್ತವಿಕ ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲುತ್ತವೆ. ಅವುಗಳಲ್ಲಿ ಮುಖ್ಯವಾದ ಕೆಲವನಿಲ್ಲಿ ಉಲ್ಲೇಖಿಸಿದೆ.

**ಸಂಸ್ಕೃತ ಉಲ್ಲೇಖಗಳು:**

**ಅಥಾಪರೇ ಜನಪದಾಃ ದಕ್ಷಿಣಾ ಭರತರ್ಷಭ**
**ದ್ರಾವಿಡಾಃ ಕೇರಲಾಃ ಪ್ರಾಚ್ಯಾ ಮೂಷಿಕಾ ವನವಾಸಿಕಾಃ**
**ಕರ್ಣಾಟಕಾ ಮಹೀಷಕಾದಿಕಲ್ಪಾ ಮೂಷಕಸ್ತಥಾ**
**ಝಿಲ್ಲಿಕಾಃ ಕುಂತಲಶ್ಚೈವ ಸೌಹೃದಾ ನಭಕಾನನಾಃ**
**(ಮಹಾಭಾರತ–ಭೀಷ್ಮಪರ್ವ, 48–59)**

ಕರ್ನಾಟ 'ದೇಶ' ವಾಚಿಯಾದ ಆಕರಗಳಿಗೆ ಇಲ್ಲಿ ಕೆಲವನ್ನು ಉದ್ಧ–ರಿಸಿದೆ: 'ಕರ್ಣಾಟಕಾನ್ ದೇಶಾನ್' (ಭಾಗ), 'ಕರ್ಣಾಟಕಾ' (ಪದ್ಮ), 'ಶ್ರೀ ಕರ್ಣಾಟಕ ವಸುನ್ಧರಾ (ಭರ್ತೃಹರಿ–ಸುಭಾಷಿತ), 'ಕರ್ಣಾಟಕಾನ್' (ಜಿನಸೇನನ ಪೂರ್ವಪುರಾಣ), 'ಕರ್ಣಾಟ' (ಸೋಮದೇವ–ಯ.ಚಂ), 'ಕರ್ಣಾಟಾಃ (ರಾಜಶೇಖರ– ವಿದ್ಧಶಾಲಭಂಜಕಾ ಹಾಗೂ ಬಾಲರಾಮಾಯಣ), 'ಕರ್ಣಾಟತ್ವಂ' (ಕ್ಷೇಮೇಶ್ವರ–ಚಂಡಕೌಶಿಕ), 'ಕರ್ಣಾಟ' (ಬಿಲ್ಹಣ, ಕಲ್ಹಣ, ಜಲ್ಹಣ–ರು), 'ಕರ್ಣಾಟಾವನಿ' (ಆರ್ಯಪಾರ್ಯ), 'ಕರ್ಣಾಟ' (ವರಾಹಮಿಹಿರ), 'ಕರ್ಣಾಟವಿಷಯೋರ್ಮಧ್ಯೇ ಮಹಾರಾಷ್ಟ್ರ ವಿಷಯಂ' (ವಾತ್ಸಾಯನ), ಪ್ರಾಚ್ಯಕರ್ಣಾಟ (ಮಾರ್ಕಂಡೇಯನ ಪಾಕೃತ ಸರ್ವಸ್ವಮ್), 'ಕರ್ಣಾಟ', 'ಕರ್ಣಾಟದೇಶ' (ಹೇಮಾದ್ರಿ ಹಾಗೂ ಶಕ್ತಿಸಂಗಮತಂತ್ರ, ವಾಚಸ್ಪತ್ಯ, ಶಂಭುರಹಸ್ಯ, ಇತ್ಯಾದಿ).

**ಪಾಲಿ, ಪ್ರಾಕೃತ, ಅಪಭ್ರಂಶ ಉಲ್ಲೇಖಗಳು:** 'ಲಾಡಾ ಕಣ್ಣಡಾ' (ಉದ್ಯೋತನ ಸೂರಿಯ ಕುವಲಯ ಮಾಲಾಕಹಾ), 'ಕಣ್ಣಾಡೀಣಂ' (ರಾಜಶೇಖರನ ಕಪ್ಪೂರಮ–ಂಜರಿ), 'ಕನ್ನಡ' (ಧನಪಾಲನ ಭವಿಸ್ಸಮತ್ತ ಕಹಾ), 'ಕಣ್ಣಾಟ' (ಚೂಳವಂಸೀಯ–ಪ್ರಾಕೃತ) 'ಮಹಿಷರಾಷ್ಟ್ರ' (ದೀಪವಂಸ –ಪಾಲಿ).

**ಇತರ ಔತ್ತರೇಯ ಆರ್ಯಭಾಷೆಗಳಲ್ಲಿನ ಉಲ್ಲೇಖಗಳು:** 'ಚುಡಗಂಗ ಕರ್ಣಾಟದೇಸರು' (ಓರಿಯಾ–ಮಾದಲಾಪಾಞ್ಜಿ), 'ಕರ್ಣಾಟಕ', 'ಕಾನಡಾ' (ಮರಾಠೀ, ಜ್ಞಾನದೇವನ ಅಭಂಗಗಳು), 'ಕರಸಾಟೀ' (ಹಿಂದೀ–ಪೃಥ್ವೀ ರಾಜರಾಸೊ).

**ಕರ್ಣಾಟಕ ಅಳರಸರ ನಾಮಖ್ಯಾತಿ:** ಕರ್ಣಾಟಕದ ಆಳರಸರು ಯಾವ ಸಂತತಿಯವರೇ ಆಗಿರಲಿ, ಅವರು ಎಲ್ಲೇ ಆಳಿದ್ದಿರಲಿ ತಮ್ಮನ್ನು ಕರ್ಣಾಟಕ

ವಂಶಸ್ಥರು, ತಮ್ಮದು 'ಕನ್ನಡಕುಲ'ವೆಂದು ಹೇಳಿರುವದು ಅವರ ರಾಷ್ಟ್ರೀಯತಾ ಮನೋಧರ್ಮದ ಪ್ರತೀಕವಾಗಿದೆ. ಶಾತವಾಹನ ರಾಜಮನೆತನದ ಹಾಲರಾಜನು ತನ್ನ ಗಾಥಾಸಪ್ತಶತಿಯ ಪ್ರತಿ ಪ್ರಕರಣಾಂತ್ಯ ಗದ್ಯ (Colophon) ದಲ್ಲಿ 'ಶ್ರೀಮತ್ಕುಂತಲ ಜನಪದೇಶ್ವರ ಪ್ರತಿಷ್ಠಾನ ಪತ್ತನಾಧೀಶ್ವರ... ಹಾಲಾ ದ್ಯುಪನಾಮಕ ಶ್ರೀ ಸಾತವಾಹನ ನರೇಂದ್ರ ನಿರ್ಮಿತಾ' ಎಂದಿದ್ದಾನೆ. ಇಲ್ಲಿನ ಕುಂತಲ ಜನಪದವು ಕರ್ನಾಟಕವನ್ನೊಳ ಗೊಂಡುದಾಗಿತ್ತೆಂದು ಬೇರೆ ಹೇಳಬೇಕಿಲ್ಲ.[7] ಅನ್ಯತ್ರ ಕಡೆಗಳಲ್ಲಿ ರಾಜ್ಯವಾಳಿದ ಕರ್ನಾಟಕದ ಹತ್ತಾರು ರಾಜವಂಶಗಳಲ್ಲಿ ಗುಜರಾತದ ಚಾಳುಕ್ಯ, ಓರಿಸ್ಸಾದ ರಾಷ್ಟ್ರಕೂಟ, ಕೊಲ್ಲಾಪುರದ ಶಿಲಾಹಾರ, ಬಂಗಾಳದ ಸೇನ ಹಾಗೂ ಮಿಥಿಲೆ ಮತ್ತು ನೇಪಾಳದ ಸಾನ್ಯದೇವಾದಿ ಕರ್ಣಾಟ ಕ್ಷತ್ರಿಯ ಮನೆತನದವರು ಪ್ರಸಿದ್ಧರಾಗಿದ್ದಾರೆ. ಬಂಗಾಲದ ಸೇನರು ಮೂಲತಃ ಧಾರವಾಡದ ನೆರೆಹೊರೆಯವರಾಗಿದ್ದು ಸಂಚಾರಗೈಯುತ್ತ ಗಂಗಾತೀರದ 'ರಾಢ'ದಲ್ಲಿ ಮೊದಲಿಗೆ ನೆಲಸಿ ಮುಂದೆ ಬಂಗಾಲದಲ್ಲಿ ಒಂದೂವರೆ ಶತಮಾನ ಕಾಲ ರಾಜ್ಯವಾಳಿದರು. ಇವರು ತಮ್ಮನ್ನು 'ಕರ್ನಾಟ ಕಿತಿಪಾಲ'ರೆಂದು ವಿಶೇಷಿಸಿಕೊಂಡಿದ್ದಾರೆ. ಇವರೆಲ್ಲರಲ್ಲಿ ಬಹುದೂರದ ಮಿಥಿಲೆಯ ಕರ್ನಾಟೇಶ್ವರರ ಬಗೆಗೆ ನಮಗೀಗ ಇನ್ನೂ ಹೆಚ್ಚಿನ ಮಾಹಿತಿಗಳು ಉಪಲಬ್ಧವಾಗುತ್ತವೆ. ಇತಿಹಾಸಜ್ಞರು ಇವರ ಮೂಲದ ಬಗೆಗೆ ಬೆಳಕು ಚೆಲ್ಲಿದ್ದಾರೆ.[8] ಚಾಳುಕ್ಯ ಆರನೆಯ ವಿಕ್ರಮಾದಿತ್ಯನ ಉತ್ತರದ ದಿಗ್ವಿಜಯಗಳ ಮೇಲಿಂದ ಮೂರು ಔತ್ತರೇಯ ರಾಜಮನೆತನಗಳು ಹೊಸದಾಗಿ ಬೆಳಕಿಗೆ ಬಂದಿವೆಯೆಂದೂ ಅವುಗಳಲ್ಲಿ (ಕನೋಜ, ಮಿಥಿಲೆ ಹಾಗೂ ಬಂಗಾಲ) ಕರ್ಣಾಟ ಮಿಥಿಲೇಶ್ವರರು ನಿಖ್ಯಾತರಾಗಿರುವರೆಂದೂ ಡಾ. ಸಿ.ಪಿ.ಎನ್. ಸಿನ್ಹಾ ಉಲ್ಲೆಖಿಸುತ್ತಾರೆ. ಆ ವಂಶದ ಮೂಲಪುರುಷನಾದ ಸಾನ್ಯದೇವನು 'ಕರ್ಣಾಟ ಕುಲಭೂಷಣ'ನೆಂದೂ ಇವನಿಗೆ ಅಧೀನನಾದ ಬಂಗಾಲದ ಸೇನಸಾಮಂತನು 'ಕರ್ಣಾಟ ಕ್ಷತ್ರಿಯಾಣಾ ಯಜನಿಕುಲ ಶೀರೋಧಾಮ ಸಾಮಂತಸೇನ'ನೆಂದೂ ಕೀರ್ತಿಗೊಂಡಿದ್ದಾರೆ.

ನೇಪಾಳ ಶಾಸನಗಳಲ್ಲಿ ಮಿಥಿಲೆಯ ಅರಸರನ್ನು 'ಕರ್ಣಾಟ ಚೂಡಾಮಣಿ' ಎಂದಿದೆ.[9] 'ಕರ್ಣಾಟ ವಂಶೋದ್ಭವ' 'ಕರ್ಣಾಟಾಧಿಪತಿ' ಎಂದಾಗಿ ಚಂಡೇಶ್ವರನು ನೇಪಾಳ ಚರಿತ್ರೆಯಲ್ಲಿ ಉಲ್ಲೇಖಿಸುತ್ತಾನೆ.[10] ನಾನ್ಯದೇವ ಲಿಖಿತ 'ಭರತ ಭಾಷ್ಯ'ದಲ್ಲಿ 'ಕರ್ಣಾಟ ಕ್ಷತ್ರಿಯ' 'ಕರ್ಣಾಟ ಕುಲಭೂಷಣ' ಎಂಬ ಒಕ್ಕಣಿಕೆಗಳಿವೆ. ಮಿಥಿಲಾಮಧ್ಯದ ಆಂಧತರಿ ಶಾಸನದಲ್ಲಿ ಹಾಗೂ ಮಿಥಿಲೆಯ ಸ್ಥಳಪುರಾಣವೊಂದರಲ್ಲಿ 'ಪರಮಾರ ಕರ್ಣಾಟ ಕ್ಷತ್ರಿಯ' ಎಂಬ ಪ್ರಶಸ್ತಿಗಳು ದೊರೆಯುತ್ತವೆ.[11] 'ನಾನ್ಯ' ಹೆಸರು ನೇಪಾಲಿಯಲ್ಲಿ ನಾನ್ಯು. ನನ್ಯುಪ, 'ನನ್ಯುಪದೇವ' ಎಂಬುದೂ ಸಹ ಕನ್ನಡದ ಪದವೇ ಆದ 'ನನ್ನಯ್ಯ' ಎಂದರೆ 'affectionate' ಎಂಬರ್ಥ ಹೊಂದಿರುವದಾಗಿ ಕೆ.ಪಿ.

ಜಯಸ್ವಾಲ ಹಾಗೂ ಕೆ.ಎಲ್. ಬರುವಾ ಸಂಭಾವಿಸಿರುವದು ಉಚಿತವಾಗಿಯೇ ಇದೆ.[12] ಕೇವಲ ನಾನ್ಯದೇವ ಅಷ್ಟೇ ಅಲ್ಲದೆ ಅವನ ತರುವಾಯದಲ್ಲಿ ರಾಜ್ಯವಾಳಿದ ಎಲ್ಲ ಅರಸರೂ ಸಹ ತಮ್ಮ ವಂಶ ಮೂಲವನ್ನು 'ಕರ್ನಾಟ'ವೆಂದಿರುವದು ಇಲ್ಲಿ ಹೆಮ್ಮೆಯ ಸಂಗತಿಯಾಗುತ್ತದೆ. ನನ್ಯದೇವನ ಮಗ ಮಲ್ಲದೇವ 'ಕರ್ಣಾಟ ವಂಶೋದ್ಭವ' (Supreme Scion of Karnatak Race). ಇವನ ಆಸ್ಥಾನ ಪೋಷಿತ ಸವರ್ಧಮಾನನು ತನ್ನನ್ನು 'ಕರ್ನಾಟ ಲಾಲನ' ಎಂದುಕೊಳ್ಳುತ್ತಾನೆ.[13] ಕರ್ಣಾಟ ಮಿಥಿಲೇಶ್ವರರ 3ನೆಯ ದೊರೆ ನರಸಿಂಹದೇವನನ್ನು (ಕ್ರಿ.ಶ. 1188–1227) 'ದಾನಪದ್ಧತಿ' ಎಂಬ ನೆಪಾಳೀ ಹಸ್ತಪ್ರತಿಯಲ್ಲಿ 'ಕರ್ಣಾಟ ಕುಲಭೂಷಣ' (The Crest-Jewel of the Karnatas) ಎಂದು ಲಿಖಿಸಲಾಗಿದೆ. ಕೊನೆಯ ಅರಸನಾದ ಹರಿಸಿಂಹದೇವನನ್ನು ವಿದ್ಯಾಪತಿಯ ಪುರುಷ ಪರೀಕ್ಷೆಯಲ್ಲಿ 'ಕರ್ಣಾಟ ಕುಲಸಂಭವ' ಹಾಗೂ 'ಕರ್ಣಾಟ ವಂಶೋದ್ಭವ'ವೆಂದಿದ್ದರೆ, ಚಂಡೇಶ್ವರನು ತನ್ನ 'ಕೃತ್ಯ ರತ್ನಾಕರ'ದಲ್ಲಿ 'ಕರ್ಣಾಟ ಚೂಡಾಮಣಿ' ಎಂದು ಸಂಬೋಧಿಸಿದ್ದಾನೆ. ಮೈಥಿಲಿಯಲ್ಲಿ ಮಧುಸೂದನ ಠಾಕೂರ ರಚಿಸಿರುವ 'ಕಂಟಕೋದಾರ' (ಹಸ್ತಪ್ರತಿ) ದಲ್ಲಿ ಓರ್ವ ರಾಮರಾಯನ ಹೆಸರಿದ್ದು, 'ಕರ್ಣಾಟ ಚಕ್ರವರ್ತಿ' 'ಭುಜಬಲ ಭೀಮ' ಎಂದು ಪ್ರಶಂಸಿಸಿದೆ. ಇದರಿಂದ ಕ್ರಿ.ಶ.16ನೆಯ ಶತಮಾನದಾಂತ್ಯದವರೆಗೂ ನೇಪಾಳ–ಮಿಥಿಲೆಗಳಲ್ಲಿ ಕರ್ಣಾಟ ಅರಸು ಬಾಳಿರಬೇಕೆಂದು ಆರ್.ಕೆ. ಚೌಧರಿ ಅಭಿಪ್ರಾಯಪಡುತ್ತಾರೆ.[14]

**ಕನ್ನಡಿಗರ ಗುಣ–ಸ್ವಭಾವ ನಿರೂಪಣೆ:** ಸಂಸ್ಕೃತ ಕಾವ್ಯ–ನಾಟಕಗಳಲ್ಲಿ ಮುಖ್ಯವಾಗಿ ಶೂದ್ರಕನ ಮೃಚ್ಛಕಟಿಕದಲ್ಲಿ 'ಕರ್ಣಾಟ ಕಲಹ ಪ್ರಯೋಗಂ ಕರೋಮಿ' ಎಂದರೆ ಕನ್ನಡಿಗರು ಯುದ್ಧಪ್ರಿಯರು ಎಂದಿದೆ. ರಾಜಶೇಖರನು 'ಸಮರ ಕರ್ಮಣಿ ನಿಸರ್ಗೋದ್ಭಟಾ ಏವ ಕರ್ಣಾಟಾ' (ವಿದ್ಧಶಾಲಭಞ್ಜಿಕಾ) 'ಅಖಂಡಿತ ಪ್ರಸರಾಹಿ ಪರುಷಾಕಾರಾಃ ಕರ್ಣಾಟಾನಾಂ' (ಬಾಲರಾಮಾಯಣ) 'ಕರ್ಣಾಷ್ಟಂಕಾರೋತ್ಕರ ಪಾಠಿನ' (ಕಾವ್ಯಮೀಮಾಂಸೆ) ಎಂದಾಗಿ ಕನ್ನಡಿಗರ ಶೌರ್ಯ, ವೀರ ಸ್ವಭಾವಗಳನ್ನು ಎತ್ತಿಹೇಳುತ್ತಾನೆ. ಕರ್ನಾಟಕ ಸ್ತ್ರೀಯರ ಸೌಂದರ್ಯ, ಕಲಾಭಿಜ್ಞತೆ ಹಾಗೂ ಸಾಹಿತ್ಯಾಭಿರುಚಿಗಳ ಬಗೆಗೂ ನಮಗೆ ಆಕರಗಳು ದೊರೆಯುತ್ತವೆ. ಹಿಂದಿಯ ಪ್ರಪ್ರಥಮ ವೀರಕಾವ್ಯವಾದ ಚಂದಬರ ದಾಯಿಯ 'ಪೃಥ್ವಿರಾಜರಾಸೋ' (ಕ್ರಿ.ಶ. 1126–92) ದಲ್ಲಿ ಕೆಳಗಿನ ಉಕ್ತಿಯಿದೆ:

**ಲೈ ಆಯೌ ನಾಯಿಕ್ಕ ಸಥ ಕರಣಟೀ ಪ್ರಿಥಿರಾಜ**
**ಜತ್ರ ತತ್ರ ಏಕಠ ಭವಸಖ್ಯೈ ನಾಜ ಸಮ್ಮಜ**

ಪೃಥ್ವಿರಾಜನ ಆಸ್ಥಾನದ ರಾಜನರ್ತಕಿಯೋರ್ವಳ ಹೆಸರು ಇಲ್ಲಿ 'ಕರನಾಟೀ'

ಎಂದಿರುವದು ವಿಶೇಷವಾಗಿದೆ. ಸೋಮದೇವನ 'ಯಶಸ್ತಿಲಕ ಚಂಪೂ'ದಲ್ಲಿ 'ಕರ್ಣಾಟ ಯುವತೀ ಶೈತವ ವಿದಗ್ಧ' ಎಂಬ ವರ್ಣನೆಯಿದೆ. ಜಲ್ಹಣನ 'ಸೂಕ್ತಿ ಮುಕ್ತಾವಲಿ'ಯಲ್ಲಿ ಕಾಳಿದಾಸನ ತರುವಾಯದಲ್ಲಿ ವೈದರ್ಭೀ ಶೈಲಿಗೆ ಹೆಸರಾದವಳು ಕನ್ನಡನಾಡಿನ ವಿಜಯೆಯೆಂಬ ಪ್ರಶಂಸೋಕ್ತಿಯಿದೆ.[15] ಉತ್ತರದ ಶಕ, ವಾಕಾಟಕ–ಚೇದಿ ಮುಂತಾದ ರಾಜರೊಡನೆ ಕರ್ನಾಟಕದ ರಾಜ ಕನ್ಯೆಯರ ವಿವಾಹ ಪ್ರಸಂಗಗಳೇರ್ಪಟ್ಟುದರಿಂದ ಕರ್ನಾಟಕ ಸಂಸ್ಕೃತಿಯ ಕೊಡು–ಕೊಳೆ ಸಾಧ್ಯವಾಗಿದೆಯೆಂದೂ ಸಹ ನಾವಿಲ್ಲಿ ಭಾವಿಸಬಹುದಾಗದೆ.

**ಕರ್ನಾಟಕ ಧರ್ಮಪರಂಪರೆ:** ಕರ್ನಾಟಕಕ್ಕೆ ವಲಸೆ ಬಂದ ಔತ್ತರೇಯ ಮತ–ಧರ್ಮ ಪಂಥಗಳಲ್ಲಿ ಬೌದ್ಧ ಧರ್ಮವು ಪ್ರಸಾರಗೊಂಡಿತಾದರೂ ಅದು ಸ್ಥಿರವಾಗಿ ಉಳಿಯಲಿಲ್ಲ. ಆದರೆ ಜೈನಮತ ಧರ್ಮ, ಕಲೆ, ಸಾಹಿತ್ಯ, ಸಂಸ್ಕೃತಿ ಕರ್ನಾಟಕದಲ್ಲಿ ವ್ಯಾಪಕವಾಗಿ ಹರಡಲು ಸಾಧ್ಯವಾಯಿತು. ವಡ್ಡಾರಾಧನದ ಭದ್ರಬಾಹು ಮುನಿಗಳ ಕಥೆ, ಚಂದ್ರಗುಪ್ತ ಮೌರ್ಯನ ಆಳ್ವಿಕೆಯ ಕಾಲದಿಂದಲೇ ಹೇಗೆ ಜೈನ ಧರ್ಮಕ್ಕೆ ಕರ್ನಾಟಕದ 'ಕಳ್ವಪ್ಪು' (ಶ್ರವಣಬೆಳಗೊಳ) ಮುಖ್ಯ ನೆಲೆಯಾಯಿತೆಂಬುದನ್ನು ವಿವರಿಸುತ್ತದೆ.[16] ಉತ್ತರ ಭಾರತದ ಓರಿಸ್ಸಾದಲ್ಲಿ ಪ್ರಚಲಿತವಿದ್ದ ಜೈನ ಧರ್ಮದ 'ಯಾಪನೀಯ' ಎಂಬ ಹೆಸರಿನ ಶ್ವೇತಾಂಬರ ಸಂಪ್ರದಾಯಕ್ಕೂ ಸಹ ಇಡೀ ದಕ್ಷಿಣ ಭಾರತದಲ್ಲಿ ರಕ್ಷಣೆ ದೊರಕುವಂತಾದುದು ಕರ್ಣಾಟಕದಲ್ಲಿ ಮಾತ್ರವೆಂಬುದನ್ನೂ ಸಹ ನಾವು ಮರೆಯುವಂತಿಲ್ಲ.[17] ಇದರಂತೆಯೆ ಅತಿ ಪ್ರಾಚೀನವಾದ ಕೆಲವೊಂದು ಔತ್ತರೇಯ ಶೈವಶಾಖೆಗಳಾದ ಗುಜರಾಥದ ಪಾಶುಪತ–ಲಾಕುಲೀಶ, ಕಾಶ್ಮೀರ ಶೈವ, ಬಂಗಾಲ–ನೇಪಾಲಗಳ ರಸೇಶ್ವರ ಹಾಗೂ ಉತ್ತರ ಪ್ರದೇಶದ 'ನಾಥ' ಸಂಪ್ರದಾಯಗಳು ಕರ್ನಾಟಕದ ವೀರಶೈವದ ಮೇಲೆ ಪ್ರಭಾವ ಬೀರಲು ಕಾರಣವಾದವು.[18]

**ಭಕ್ತಿಪಂಥ, ಪ್ರಸಾರ, ಪ್ರಭಾವಗಳು:** ಪದ್ಮಪುರಾಣದಲ್ಲಿ "ಉತ್ಪನ್ನೇ ದ್ರಾವಿಡೇಸಾಹಂ ವೃದ್ಧಿಂ ಕರ್ಣಾಟಕೇ ಗತಾ । ಕ್ವಚಿತ್ ಕ್ವಚಿನ್ಮಹಾರಾಷ್ಟ್ರೇ ಗುರ್ಜರೇ ಜೀರ್ಣತ್ವಾಂ ಗತಾ" ಎಂದು ಹೇಳಿರುವದರಿಂದ 'ಭಕ್ತಿ' ಜನಿಸಿದ್ದು ದ್ರಾವಿಡದೇಶದಲ್ಲಿ, ವೃದ್ಧಿಗೊಂಡುದು ಕರ್ನಾಟಕದಲ್ಲಿ. ಕರ್ನಾಟಕದ ಶಿವಶರಣರ ಭಕ್ತಿಪ್ರಭಾವಲಯದಲ್ಲಿ ಕಾಶ್ಮೀರದಿಂದ ಕೇರಳದವರೆಗಿನ ಶರಣರು ಪಾಲ್ಗೊಂಡಿದ್ದರೂ ಸಹ ಬಸವೇಶ್ವರರ ತರುವಾಯ ಅದು ಹೆಚ್ಚು ಉತ್ತರದ ಕಡೆಯಲ್ಲಿ ಪ್ರಸಾರಗೊಳ್ಳಲಿಲ್ಲ. ಆದರೆ ಕರ್ಣಾಟಕದಲ್ಲೆ ಹುಟ್ಟಿದ ಮಾಧ್ವಪಂಥ, ಮಧ್ವಾಚಾರ್ಯರ ಜ್ಞಾನಯಾತ್ರೆಗಳ ಫಲವಾಗಿ ಹರಿದಾಸಪಂಥದ ಪ್ರಭಾವ ಉತ್ತರದಲ್ಲಿ ಹೆಚ್ಚುವಂತಾಯಿತು. ಮಧ್ವಾಚಾರ್ಯರು ಬಂಗಾಲದೇಶದಲ್ಲಿ ಪುರಸ್ಕೃತರಾದ ಸಂಗತಿ 'ತಾರೀಖೇ ಫಿರೋಜಶಾಹಿ' ಎಂಬ

ಗ್ರಂಥದಲ್ಲಿ ವ್ಯಕ್ತಗೊಂಡಿದೆ. ಇಂದಿಗೂ ಬಂಗಾಲದೇಶದಲ್ಲಿ ರಾಜೇಂದ್ರ ಮಠದಲ್ಲಿ ಮಾಧ್ವ ಸಾಂಪ್ರದಾಯಿಕ ಆಚರಣೆ–ನೇಮಗಳು ರೂಢಿಯಲ್ಲಿವೆ. ಮಧ್ವಾಚಾರ್ಯರ ಸೈದ್ಧಾಂತಿಕ ಪ್ರಭಾವ ಬಂಗಾಲದ ಚೈತನ್ಯ ಪಂಥದ ಮೇಲೆ ದಟ್ಟವಾಗಿದೆ. ಇದಕ್ಕೆ ಕಾರಣವೂ ಉಂಟು. ಚೈತನ್ಯ ಮಹಾಪ್ರಭುವಿನ ತತ್ತ್ವಗಳನ್ನು ಪ್ರಚುರಪಡಿಸಿದ ಅವನ ಆರು ಜನ ಪ್ರಮುಖ ಶಿಷ್ಯರಲ್ಲಿ ಮೂವರು ಸ್ವಾಮಿಗಳು–ರೂಪ ಗೋಸ್ವಾಮಿ, ಸನಾತನ ಗೋಸ್ವಾಮಿ ಹಾಗೂ ಜೀವ ಗೋಸ್ವಾಮಿಗಳು ಕನ್ನಡದ ಪರಂಪರೆಯಲ್ಲಿ ಬಂದವರು.

ಇವರಲ್ಲಿ ರೂಪ ಗೋಸ್ವಾಮಿಯನ್ನು ಚೈತನ್ಯಭಕ್ತಿಪಂಥದ ಮಹಾಶಿಲ್ಪಿ, ಬಂಗಾಲದ ವೈಷ್ಣವ ಭಕ್ತಿಪಂಥದ ಹರಿಕಾರನೆಂದು ಭಾವಿಸಲಾಗಿದೆ. ವಾಗ್ಗೇಯಕಾರನಾಗಿ ನಾಟಕ, ರೂಪಕಗಳ ರಚಯಿತೃವಾಗಿ ಅಲ್ಲದೆ ಕೃಷ್ಣಭಕ್ತಿಯ ತತ್ವ–ಸಿದ್ಧಾಂತಗಳ ಸಮಾಲೋಚಕನಾಗಿ ಬಂಗಾಲಿ ಸಾಹಿತ್ಯ ಚರಿತ್ರೆಗೆ ಇವನಿತ್ತ ಕೊಡುಗೆ ಅತ್ಯಪೂರ್ವವಾಗಿದೆ. ಕೃಷ್ಣನ ಆಖ್ಯಾಯಿಕೆಗಳನ್ನಾಧರಿಸಿ ಈ ದಾನಕೇಲಿ ಕೌಮುದಿ, ಹಂಸದೂರ, ಉದ್ದವಸಂದೇಶ, ವಿದಗ್ಧ ಸಂದೇಶ, ಲಲಿತ ಮಾಧವ, ವೃಂದಾವನಲೀಲ ಮುಂತಾದ ಉಪರೂಪಕ, ರೂಪಕಗಳನ್ನು ರಾಗ–ತಾಳ–ನೃತ್ಯ–ನಾಟಕಕ್ಕಳವಡುವಂತೆ ರಚಿಸಿದ್ದಾನೆ. ಲಘುಪ್ರಕಾರದ ಸಾಹಿತ್ಯವಷ್ಟೇ ಅಲ್ಲದೆ, 'ಪ್ರಯುಕ್ತಖ್ಯಾತ ಚಂದ್ರಿಕಾ' ಎಂಬ ಬಂಗಾಳಿ ಭಾಷೆಗೆ ಸಂಬಂಧಿಸಿದ ಒಂದು ವ್ಯಾಕರಣ ಕೃತಿಯನ್ನೂ ಸಹ ರಚಿಸಿದ್ದಾನೆ. ಇಂತಹ ಶ್ರೇಷ್ಠ ಶಿಷ್ಯಸಂತಾನ ಶ್ರೇಣಿ ಕರ್ನಾಟಕ ವಂಶಮರೆಯಾಗಿ ಬಂಗಾಲದಲ್ಲಿ ಹೆಸರಾದುದು ಕರ್ಣಾಟಕದ ಭಕ್ತಿ ಪರಂಪರೆಯ ಚರಿತ್ರೆಯಲ್ಲಿ ಉಲ್ಲೇಖನೀಯ ಸಂಗತಿಯಾಗಿದೆ.

**ಕರ್ನಾಟಕ ಸಂಗೀತ:** 'ಉತ್ತರಾದಿ'ಯೆಂದು ಪ್ರತೀತಿಯಲ್ಲಿರುವ ಸಂಗೀತ ಪದ್ಧತಿಯಲ್ಲಿ ಆಯಾ ದೇಶ ಮಾರ್ಗ ಪದ್ಧತಿಗನುಸರಿಸಿ ವಿವಿಧ ರಾಗಗಳನ್ನು ಹೆಸ–ರಿಸಲಾಗಿದೆ. ಅವುಗಳಲ್ಲಿ 'ಕರ್ನಾಟಕ' ರಾಗವೂ ಒಂದು. ಮತಂಗನ 'ಬೃಹದ್ದೇಸಿ', ಅಭಿನವಗುಪ್ತನ 'ಅಭಿನವ ಭಾರತಿ', ಕರ್ನಾಟಕ ಮಿಥಿಲೇಶ್ವರ ನಾನ್ಯದೇವನ 'ಸರಸ್ವತೀ ಹೃದಯಾಲಂಕಾರ', ಹರಿಪಾಲನ 'ಸಂಗೀತ ರತ್ನಾಕರ' ಮುಂತಾದ ಕಡೆಗಳಲ್ಲಿ 'ಕರ್ನಾಟ' ರಾಗದ ಪ್ರಶಸ್ತಿಯಿದೆ.

ದೇವಗಿರಿಯ ದೊರೆ ಸಿಂಘಣನ ಆಸ್ಥಾನ ಪೋಷಕ ಹಾಗೂ ಕೋಶಾಧ್ಯಕ್ಷನಾಗಿದ್ದ ನಿಶ್ಶಂಕ ಶಾರ್ಙ್ಗದೇವನ 'ಸಂಗೀತ ರತ್ನಾಕರ' ಭಾರತೀಯ ಸಂಗೀತಶಾಸ್ತ್ರಕ್ಕೆ ಮೂಲಾಧಾರ ಗ್ರಂಥವೆಂದು ಮಾನ್ಯವಾಗಿದೆ. 'ಕರ್ನಾಟಕ' ಸಂಗೀತವನ್ನು 'ದಕ್ಷಿಣಾದಿ' ಪದ್ಧತಿಯೆಂದು ಕರೆಯಲಾಗುತ್ತಿದ್ದರೂ ಶಾರ್ಙ್ಗದೇವ ಇಲ್ಲಿಯೂ ತನ್ನ

ಗ್ರಂಥದಲ್ಲಿ ಅದನ್ನು 'ದಕ್ಷಿಣಾದಿ'ಯೆಂದು ಕರೆಯದೆ ಕರ್ಣಾಟ ಸಂಗೀತವೆಂದೇ ಹೆಸರಿಸುತ್ತಾನೆ. ಉತ್ತರಾದಿ ರಾಗಗಳೊಂದಿಗೆ ಹೊಂದಿಸಿ 'ಕರ್ನಾಟಕ' ಸಂಗೀತದ ವ್ಯಾಪ್ತಿಯನ್ನು ಭಾರತದಾದ್ಯಂತ ಪ್ರಚುರಪಡಿಸಿದ ಕೀರ್ತಿ ಶಾರ್ಙ್ಗದೇವನದಾಗಿದೆ. ಇದನ್ನು ಇನ್ನಷ್ಟು ಸ್ಥಿರಗೊಳಿಸಿ ಅದರ ಪ್ರಸಾರಕ್ಕೆ ಕಾರಣನಾದ ವ್ಯಕ್ತಿ 'ಪುಂಡರೀಕ ವಿಠಲ', ತನ್ನನ್ನು 'ಕರ್ಣಾಟ ಜಾತೀಯ'ನೆಂದೇ 'ಸದಾಗ್ರ ಚಂದ್ರೋದಯ'ದ ಪ್ರತಿ ಪ್ರಕರಣಾಂತ್ಯದಲ್ಲಿ ಹೇಳಿಕೊಂಡಿದ್ದಾನೆ.[19] ಪುಂಡರೀಕ ವಿಠಲನ ಜೀವನ ವೃತ್ತಾಂತಗಳು ಅತ್ಯಂತ ರೋಚಕವಾಗಿವೆ. ಹುಟ್ಟು ಕನ್ನಡಿಗನಾದರೂ ಔತ್ತರೇಯ ಸಂಗೀತದ ಮಹೋಪಾಸಕನಾದ ಈತನನ್ನು ಹಿಂದುವಾಗಿದ್ದರೂ ಕಲಾಪ್ರೇಮದಿಂದಾಗಿ ಅಹಮ್ಮದನಗರದ ಬುರ್ಹಾನಖಾನ್ ಈತನಿಗೆ ಆಶ್ರಯವಿತ್ತು ಅವ್ಯವಸ್ಥಿತವಾದ ಸಂಗೀತವನ್ನು ಸುವ್ಯವಸ್ಥಿತಗೊಳಿಸಬೇಕೆಂದು ಬಿನ್ನವಿಸಿದಾಗ 'ಸದಾಗ್ರ ಚಂದ್ರೋದಯ' ಗ್ರಂಥವನ್ನು ಪುಂಡರೀಕ ವಿಠಲ ರಚಿಸಿದ್ದಾಗಿ ತಿಳಿದುಬರುತ್ತದೆ. ರಾಗಮಂಜರಿ ಅಥವಾ ರಾಗ-ರಾಗಿಣಿ ಪದ್ಧತಿಗಳನ್ನು ಇದರಲ್ಲಿ ವಿವರಿಸಲಾಗಿದ್ದು, ಮೇಳ ಪದ್ಧತಿಯ ಸಂಗೀತಕ್ಕೆ ಇವನ ಗ್ರಂಥ ಆಕರವಾಗಿದೆ. ಅಹಮ್ಮದನಗರದ ಪತನಾನಂತರ ಗ್ವಾಲಿಯರದ ಮಾರಸಿಂಹನ ಆಸ್ಥಾನದಲ್ಲಿ ಕೆಲಕಾಲ ಉಳಿದು ಅನಂತರ ಮೊಗಲ್ ಬಾದಶಹನಾದ ಅಕ್ಬರನ ಆಸ್ಥಾನ ಗಾಯಕರಲ್ಲಿ ವಿರಾಜಿತನಾಗಿ ವಿಖ್ಯಾತನಾದುದು ಕರ್ನಾಟಕ ಸಂಗೀತಗಾರನೊಬ್ಬನ ದಿಗ್ ದಿಗಂತದ ಪ್ರಭಾವಕ್ಕೆ ನಿದರ್ಶನ. ಇದರಂತೆಯೇ 'ಸಂಗೀತ ಚಂದ್ರೋದಯ'ದ ಕರ್ತೃ ಲಕ್ಷ್ಮೀಧರ ಪಂಡಿತನ ಮಗ ದಾಮೋದರ ಪಂಡಿತನೂ ಸಹ ಕನ್ನಡಿಗನೆ ಆಗಿದ್ದು ಜಹಂಗೀರನ ಆಸ್ಥಾನ ಗಾಯಕನಾಗಿದ್ದು 'ಸಂಗೀತದರ್ಪಣ'ವನ್ನು ಬರೆದಿದ್ದಾನೆ.

**ಶಿಲ್ಪ-ಚಿತ್ರ-ನಾಟ್ಯ-ನಾಟಕ ಕಲೆಗಳ ಪ್ರಸಿದ್ಧಿ:** ಕರ್ನಾಟಕವು ಕಲೆಗಳ ಬೀಡೆಂಬುದು ಕೇವಲ ಕರ್ನಾಟಕದ ಇಂದಿನ ಗಡಿರೇಖೆಗಳನ್ನು ಗಮನಿಸಿ ಹೇಳಿದರೆ ಅದರ ವ್ಯಾಪ್ತಿಗೆ ಅರ್ಥವೇ ಉಳಿಯುವದಿಲ್ಲ. ಅದನ್ನು ನಾವು ಐತಿಹಾಸಿಕವಾಗಿ ನೋಡಿದಾಗ ಕರ್ನಾಟಕದ ಆಳರಸರು ಕರ್ನಾಟಕ ಸಂಸ್ಕೃತಿಯ ಹೆಗ್ಗುರುತುಗಳನ್ನು ಕಲಾ ಪ್ರಪಂಚದಲ್ಲಿ ಹೇಗೆ ಸ್ಥಿರಗೊಳಿಸಿ, ಸಮನ್ವಯೀಕರಿಸಿ ಹೋಗಿರುವರೆಂಬ ಅಂಶ ಸ್ಪಷ್ಟವಾಗುತ್ತದೆ.

ಅಶೋಕನ ಕಾಲದಿಂದಲೂ ಬೌದ್ಧರ ಚೈತ್ಯ, ಸ್ತೂಪ ಮಾದರಿಯ ಕಟ್ಟಡಗಳನ್ನು ನಾವು ಕರ್ನಾಟಕದಲ್ಲಿ ಕಾಣುತ್ತೇವೆ. ಫರ್ಗ್ಯುಸನ್ ಪ್ರಪ್ರಥಮವಾಗಿ ಹೆಸರಿಸಿದ 'ಚಾಳುಕ್ಯ ಶಿಲ್ಪ' ಎಂಬುದು ದಕ್ಷಿಣದ ದ್ರಾವಿಡ ಹಾಗೂ ಉತ್ತರದ 'ನಾಗರ' ಇವೆರಡು ಶಿಲ್ಪಶೈಲಿಗಳ ಮಿಶ್ರ ಛಾಯೆಯನ್ನೊಳಗೊಂಡಿವೆಯೆಂಬುದಕ್ಕೆ ಐಹೊಳೆಯ ದುರ್ಗಾ ದೇವಾಲಯ ಇಲ್ಲಿ ಉಲ್ಲೇಖನೀಯವಾಗಿದೆ. ಬಾದಾಮಿಯ

ಗವಿಗಳಿಗೂ ಅಜಂತೆಯ ಲೋಕಪ್ರಸಿದ್ಧ ಗುಹಾಂತರ ದೇವಾಲಯಗಳಿಗೂ ಶಿಲ್ಪ, ವಿಗ್ರಹ ಹಾಗೂ ವಾಸ್ತುಶಿಲ್ಪ ಮಾದರಿಯಲ್ಲಿ ನಿಕಟ ಸಂಬಂಧವಿದೆ. ಬಾದಾಮಿಯ ಒಂದು ಶಿವ ದೇವಾಮ್ಲೇಚ್ಛನಾದ ಅಹಮ್ಮದನಗರದ ಸುಲ್ತಾನ ಮಹಮ್ಮದನಿಗೆ ತನ್ನ ಮಗಳನ್ನು ಧಾರೆಯೆರೆಯಲೊಪ್ಪದೆ ಯುದ್ಧ ಸಾರಿ ಅದರಲ್ಲಿ ಜಯಶಾಲಿಯಾದ ಪ್ರಸಂಗವನ್ನಾಧರಿಸಿ ಗಂಗಾಧರ ಕವಿಯು ಬರೆದ ನಾಟಕವೇ 'ಗಂಗಾದಾಸ ಪ್ರತಾಪ ವಿಲಾಸಂ'. ಇದನ್ನು ಪ್ರತ್ಯಕ್ಷ ಪ್ರಯೋಗಕ್ಕೆ ತಂದು ಅಭಿನಯಕ್ಕಾಗಿ ಅಲ್ಲಿ ಯೋಗ್ಯ ನಟರು ದೊರಕದಿದ್ದಾಗ ವಿಜಯನಗರದ ನಾಟ್ಯ ಕಲಾವಿದರನ್ನು ಕರೆಸಿಕೊಂಡು ಅದನ್ನು ಮಹಾನವಮಿಯ ಪರ್ವಕಾಲದಲ್ಲಿ ಅಲ್ಲಿ ಪ್ರದರ್ಶಿಸಲಾಯಿತು. ವಿಜಯನಗರದ ಕಲೆ, ಸಂಸ್ಕೃತಿ, ಪರ್ವ, ಉತ್ಸವಗಳೆಲ್ಲವೂ ಇಲ್ಲಿ ಚಿತ್ರಿತವಾಗಿರುವದಷ್ಟೇ ಅಲ್ಲ, ಅದರ ಆಭಿನಯದಲ್ಲಿ ಪಾಲ್ಗೊಂಡವರೂ ಸಹ ಕರ್ನಾಟಕದ ನಟರು. ಅದರ ರಚಿಯಿತ್ರ ಕನ್ನಡಿಗ. ಗುಜರಾಥದ ಚಂಪಾನೇರದ ದೊರೆ 'ಗಂಗದಾಸ'ನ ಮುಖದಿಂದಲೇ ಆ ನಾಟಕದಲ್ಲಿ ಹೊರಹೊಮ್ಮಿ ಬರುವ ಒಂದು ಮಾತು; 'ಕರ್ಣಾಟ ನಾಟ್ಯಕಾರೇಣ ಯುವರಾಜಾದಿ ರೂಪಕಾಭಿನಯಂ ಕರೋಮಿ!' ಏಕೈಕ ಲಭ್ಯವಾದ ಈ ನಾಟಕದ ಹಸ್ತಪ್ರತಿ ಇದೀಗ ಗಾಯಕವಾಡ ಪ್ರಾಚ್ಯ ಸಂಶೋಧನ ಮಾಲಿಕೆಯಲ್ಲಿ ಪ್ರಕಟಗೊಂಡಿದ್ದು, ಅದರ ಪೂರ್ವಪೀಠಿ–ಕೆಯಲ್ಲಿ ಮೇಲಿನ ಸಂಗತಿಗಳನ್ನು ಪ್ರಸ್ತಾಪಿಸಲಾಗಿದೆ.

ಇಂತಹ ಇನ್ನೆಷ್ಟೋ ಅನ್ಯತ್ರ ಕಡೆಗಳಲ್ಲಿನ ಕರ್ನಾಟಕ ಸಂಸ್ಕೃತಿಯ ಕುರುಹುಗಳನ್ನು ನಾವು ಒಂದೆಡೆಗೆ ಸಂಗ್ರಹಿಸಿ, ಬೃಹತ್ ಸಾಂಸ್ಕೃತಿಕ ಕರ್ನಾಟಕದ ಪರಿಕಲ್ಪನೆ ನಮಗಷ್ಟೇ ಅಲ್ಲದೆ ಹೊರಗಿನವರಿಗೂ ಸಹ ಹೊಳೆಯುವಂತೆ ಮಾಡುವ ಪ್ರಯತ್ನ ನಡೆಯಬೇಕಾಗಿದೆ. ಜನಾಂಗ, ಭಾಷೆ, ಧರ್ಮ, ಕಲೆ, ಆಡಳಿತ, ಸಾಹಿತ್ಯ, ಸಮಾಜ ಇವು ಯಾವುದೇ ನಾಡಿನವರಿಗೂ ಸಹ ಅವರವರ ಮಟ್ಟಿಗೆ ಅಭಿಮಾನದ ವಿಷಯಗಳೆ ಆಗುತ್ತವೆ. ಆದರೆ ಸಾಂಸ್ಕೃತಿಕ ಸಂದರ್ಭದಲ್ಲಿ ಇಂತಹ ವಿಷಯಗಳಿಗೆ ಭೌಗೋಲಿಕ, ರಾಜಕೀಯವಾದ ಗಡಿರೇಖೆಗಳನ್ನು ಗೊತ್ತುಪಡಿಸುವದು ಆಗದ ಮಾತು. ಸಂಸ್ಕೃತಿಯ ಅರ್ಥ ವಿಶಾಲವಾದುದು. ಅದು ಪರಸ್ಪರ ಪ್ರೇರಿತ, ಪೋಷಿತ. ಕರ್ನಾಟಕ ಸಂಸ್ಕೃತಿ ತನ್ನ ಸತ್ತ್ವವನ್ನು ಹೊರಗೆ ಪ್ರಕಟಿಸಿರುವಂತೆ ಹೊರಗಿನ ಎಷ್ಟೋ ಅಂಶಗಳಿಂದ ಪ್ರಭಾವಗೊಂಡುದೂ ಉಂಟು. ಈ ನಿಟ್ಟಿನಲ್ಲಿ ಪಾರಸ್ಪರಿಕ ಸಾಂಸ್ಕೃತಿಕ ವಿನಿಮಯದ ಅಧ್ಯಯನಕ್ಷೇತ್ರವನ್ನು ನಾವೀಗ ವಿಸಿರಿಸಬೇಕಾಗಿದೆ.

**ಕೊನೆ ಟಿಪ್ಪಣಿಗಳು:**

1. ಸಂತಾಲ, ಮುಂಡ, ಬಿರ್ಹೊರ, ಅಸುರ, ಕೊರಬ, ಕೋಲ, ಜುಯಂಗ ಮುಂತಾದವರು Proto-Austroloid ಸಂತತಿಗೆ ಸೇರಿದವರಾಗಿದ್ದಾರೆ.
2. Vatsayana: Comparative Sociology, 1981.
3. "It credits them (Dravidians) with urban culture entered in its cities of stone and metal which had to be stormed by the Aryan God Indra as Purandra" Radha Kumud Mookarji: Glimpses of Ancient India, 1961.
4. 'ತ್ರಿಶೃಂಗಧಾರಿ' ತ್ರಿಣೇತ್ರ ಆರಾಧಕ ಮುನಿಗಳ ವಿಗ್ರಹಗಳನ್ನು ಈ ಚಿಹ್ನೆಗಳಿಂದ ಅಲ್ಲಿನ ಕಲಾವಿದರು ಸೂಚಿಸಿದ್ದಾರೆ. ಇವರನ್ನು 'ಭಾಳಾಕ್ಷ ಸಿದ್ಧಿ, ಸಾಧಕ ಮುನೀಶ್ವರ'ರೆಂದು ಶಂ.ಬಾ. ಜೋಶಿ ಊಹಿಸಿದ್ದಾರೆ. ನೋಡಿ: ಋಗ್ವೇದಸಾರ–ನಾಗಪ್ರತಿಮಾ.
5. ಹೆಚ್ಚಿನ ವಿವರಗಳಿಗೆ ನೋಡಿ: ಶಂ.ಬಾ. ಜೋಶಿ: ಶಿವರಹಸ್ಯ: ಡಾ॥ ಜ.ಚ.ನಿ., ಚಿಗುರಿಟ್ಟ ಚಿಂತನ.
6. 'ಸ್ತೇನಾನಾಂಪತಯೇ ನಮಃ' ಎಂದು ರುದ್ರಾಧ್ಯಾಯದಲ್ಲಿ ಹೇಳಿದೆ.
7. ಕುಂತಲನಾಡಿನ ಭೌಗೋಳಿಕ ವ್ಯಾಪ್ತಿ, ಗಡಿ–ಗೆರೆಗಳ ಬಗೆಗೆ ಜೆ. ಎಫ್. ಫ್ಲೀಟ್, ಜಿ. ಎಸ್. ಗಾಯಿ ಮುಂತಾದವರು ಯೋಚಿಸಿದ್ದಾರೆ. ಅಜಂತೆಯನ್ನೊಳಗೊಂಡು ಕರ್ನಾಟಕದ ಧಾರವಾಡ, ಬಳ್ಳಾರಿ, ಬನವಾಸಿ, ಬೆಳಗಾಂ ಜಿಲ್ಲೆಗಳ ಭಾಗ ಕುಂತಲದಲ್ಲಿ ಸೇರುತ್ತವೆ. ಕರ್ನಾಟಕದ ಆಳರಸರು ಮುಖ್ಯವಾಗಿ ಕಲ್ಯಾಣಿ ಚಾಳುಕ್ಯರು ತಮ್ಮನ್ನು 'ಕುಂತಲೇಶ್ವರ' ಎಂದಿದ್ದಾರೆ.
8. "The Sena Inscriptions reveal to us that originally the Karnatas belong to the South"-Inscriptions of Bengal, Nos, 110, 113, Verse IV, cf, IHQ., XII (611-12); ವಿಶೇಷಕ್ಕೆ J.F. Fleet: The Topographical List of Brihit Samhit, 1973.
9. Dynastic History of Northern India.
10. 'Levi to Nepal', Indian Antiquary, 1880.
11. ರಾಸ್ ಬಿಹಾರಿದಾಸ: ಮಿತಿಲಾ ದರ್ಪಣ.
12. R.P. Baruva: Early History of Kamarupa.
13. ಮಲ್ಲದೇವನು ತನ್ನ ಹೆಸರಿನಲ್ಲಿ 'ಮಲ್ವಾಡ' ಎಂಬ ಊರನ್ನು ಸ್ಥಾಪಿಸಿದ್ದು, ಅದನ್ನು ಕರ್ನಾಟಕದ ಗ್ರಾಮನಾಮವೆಂದೇ ಸ್ವೀಕರಿಸಬಹುದಾಗಿದೆ. (ನೇಪಾಲ–ಸುಪಾಲ ವಲಯದಲ್ಲಿ ಈ ಸ್ಥಳ ಈಗಲೂ ಅಸ್ತಿತ್ವದಲ್ಲಿದೆ)
14. The Later Karnatas of Mithila
15. ಸರಸ್ವತೀವ ಕರ್ಣಾಟೀ ವಿಜಯಾಂಕಾ ಜಯತ್ಯಸೌ ವಿದರ್ಭಗಿರಾಂ ವಾಸಃ ಕಾಲಿದಾಸಾದನಂತರಮ್ । (ಜಲ್ಹಣ).
16. **"**ಕಟ್ಟಿಪ್ಪನಾಡನೆಯ್ದಿ ಪೋಗುತ್ತುಂ ಭದ್ರಬಾಹುಭಟ್ಟಾರರ್ ತಮ್ಮಾಯುಷ್ಯ ಪ್ರಮಾಣಮಜೆದಾಮಿಲ್ಲಿ ಸಂನ್ಯಸನಂಗೆಯ್ದಪ್ಪೆವು**"** ಡಿ.ಎಲ್.ಎನ್. (ಸಂ.): ವಡ್ಡಾರಾಧನ.

17. ವಿವರಗಳಿಗೆ: ಎಂ. ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. 75–79.
18. ಉತ್ತರದ 48 ನಾಥರಲ್ಲಿ 'ಕಣ್ಣಪಾ' ಬಹುಶಃ ಕರ್ಣಾಟಕದವನೆಂದು ರಾಹುಲ ಸಾಂಕೃತ್ಯಾಯನ ಭಾವಿಸಿದ್ದಾರೆ. ಗೋರಕ್ಷಕನಿಗೂ ಅಲ್ಲಮಪ್ರಭುವಿಗೂ ಉಂಟಾದ ಸಂಬಂಧಗಳ ಮೇಲಿಂದಲೂ ನಾವು ಉತ್ತರದ ನಾಥ ಸಂಪ್ರದಾಯದ ಪ್ರಭಾವವನ್ನು ಗರುತಿಸಬಹುದು. ಗೋರಕ್ಷನ ಹಠಯೋಗ ಪ್ರದೀಪಿಕೆಯಲ್ಲಿ 'ಅಲ್ಲಮಾಪ್ರಭುದೇವಶ್ಚ ಖಂಡಃ... ಇತ್ಯಾದಯೋಮಹಾಸಿದ್ಧಾ ಹಠಯೋಗ ಪ್ರಭಾವತಃ' ಎಂದು ಹೇಳಿದೆ (ಹಠಪ್ರ 1–6) ನೋಡಿ: ಮ.ಸು. ಕೃಷ್ಣಮೂರ್ತಿ: ಸಿದ್ಧಸಾಹಿತ್ಯ.
19. "ಇತಿ ಶ್ರೀ ಕರ್ಣಾಟ ಜಾತೀಯ ಪುಂಡರೀಕ ವಿಠಲ ವಿರಚಿತೆ ಸದಾಗ್ರ ಚಂದ್ರೋದಯೇ"– ಪ್ರಕರಣಾಂತ್ಯ ಗದ್ಯ.

**[ಸಂಶೋಧನ: 1991]**